

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 08 Issue : 18 Sunday 21-09-2025 E-mail : maruti.b.hosamani76@gmail.com Page: 4 Price : Rs. 1/-


# ಸಂದೇಹಗಳನ್ನು ದೂರೀಕರಿಸಿ ಶಾಂತಿ ಸ್ಥಾಪಿಸಿ –ಬಾಬರ್ ಬೇಗ್







**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಭಾರತದಂತಹಾ ವಿವಿಧತೆ ಯಿಂದ ಕೂಡಿದ ಸಮಜ ಸದೃಢವಾಗ ಬೇಕಾದರೆ, ಆ ಸಮಾಜದ ನಡುವೆ ಸಂದೇಹಗಳಿರ ಬಾರದು. ಒಂದು ವೇಳೆ ಸಂದೇಹಗಳಿದ್ದರೆ, ಆ ಸಮಾಜದಲ್ಲಿ ಶಾಂತಿ ಉಳಿಯಲು ಸಾಧ್ಯವಿಲ್ಲ. ಪರಸ್ಪರರನ್ನು ಹಾಗೂ ಅವರ ಧರ್ಮವನ್ನು ಅರಿಯುವುದರ ಮೂಲಕ ಸಂದೇಹಗಳನ್ನು ದೂರೀಕರಿಸಿ, ಶಾಂತಿ ಸ್ಥಾಪಿಸ ಬೇಕಾಗಿದೆ ಎಂದು ಸೀರತ್ ಅಭಿಯಾನದ ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬಾಬರ್ ಬೇಗ್ ರವರು ಅಭಿಪ್ರಾಯ ವ್ಯಕ್ತಪಡಿಸಿದರು.

ಜಮಾಅತೇ ಇಸ್ಲಾಮೀ ಹಿಂದ್ ಮಾನವಿ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಸೀರತ್ ಅಭಿಯಾನ ಸಮಾರೋಪ ಕಾರ್ಯಕ್ರಮವನ್ನು ನಗರದ ಕುಬಾ ಮಸ್ಜಿದ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಮಿನ್ಹಾಜ್ ಉಲ್ ಹಸನ್ ರವರು ಜೀವನದಲ್ಲಿ ನೀವು ಏನೇ ಆಗಿ, ಆದರೆ ಒಳ್ಳೆ ಮನುಷ್ಯರಾಗಿ. ಮಹಮ್ಮದ್ ಪೈಗಂಬರರು ಮನುಷ್ಯರನ್ನು ಮನುಷ್ಯರಾಗಿಸಲು ಬಂದರು. ಅವರನ್ನು ಅರಿಯಲು ಈ ಸೀರತ್ ಅಭಿಯಾನ ಸಹಕಾರಿಯಾಗಿದೆ ಎಂದರು.

ಜಮಾಅತಿನ ವತಿಯಿಂದ ಪ್ರಬಂಧ ಸ್ಪರ್ಧೆಯನ್ನು ವಿವಿಧ ಕಾಲೇಜುಗಳಲ್ಲಿ ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಪ್ರಥಮ ದರ್ಜೆ ಪದವಿ ಕಾಲೇಜಿನ ವಿದ್ಯಾರ್ಥಿನಿ ಕೀರ್ತಿ ಪ್ರಥಮ ಸ್ಥಾನ ಪಡೆದು ಕೊಂಡರೆ, ಬಬ್ರುವಾಹನ ದ್ವಿತೀಯ ಹಾಗೂ ತೃತೀಯ ಬಹುಮಾನವನ್ನು ಸರ್ವೋದಯ ಕಾಲೇಜಿನ ತನಜ್ ಆಸ್ಮಿನ್ ದ್ವಿತೀಯ ಪಿ.ಯು.ಸಿ ಯವರು ಪಡೆದುಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜನಾಬ್ ಬಾಬರ್ ಬೇಗ್ ಸಾಬ್ ಸಿಂದನೂರ್

ಮುಖ್ಯ ಅತಿಥಿಗಳಾಗಿ ಸೈಯದ್ ಮಿನ್ಹಾಜ್–ಉಲ್–ಹಸನ್

ಜಿಲ್ಲಾಧ್ಯಕ್ಷ ಏಖಉ ಒಇಘಂ ರಾಯಚೂರು ಪ್ರಾಂಶುಪಾಲರು

ಬಾಶುಮಿಯಾ ಸಾಹುಕಾರ ಸರಕಾರಿ ಪ್ರಥಮ ದರ್ಜೆ ಕಾಲೇಜು ಮಾನ್ವಿ ಸೈಯದ್ ಮುಜೀಬ್ ಅಹೆಮದ್

ಉಪನ್ಯಾಸಕರು, ಬಾಶುಮಿಯಾ ಸಾಹುಕಾರ ಸರಕಾರಿ ಪ್ರಥಮ ದರ್ಜೆ ಕಾಲೇಜು ಮಾನ್ವಿ ಅಬ್ದುಲ್ ರೆಹಮಾನ್, ಸಾಬ್ ಅಧ್ಯಕ್ಷರು ಜಮಾಅತೆ ಇಸ್ಲಾಮಿ ಹಿಂದ್ ಮಾನ್ವಿ ಅಬ್ದುಲ್ ಅಜೀಮ್ ಅಧ್ಯಕ್ಷರು ಖಋಔ ಮಾನ್ವಿ ಎಮ್.ಎ

ಎಚ್. ಮುಖೀಮ್ ಸೀರಾತ್ ಅಭಿಯಾನ ಸಂಚಾಲಕರು ಸಬ್ಜಾಲಿ ಶಿಕ್ಷಕರು ಏಖಉ ಪ್ರಧಾನ ಕಾರ್ಯದರ್ಶಿಗಳು ಸೈಯದ್ ಅಕ್ಬರ್ ಪಾಶ ಸಾಬ್ ಅಬ್ದುಲ್ ಕರೀಂ ಖಾನ್ ಸಾಬ್ ಮೊಹಮ್ಮದ್ ದಾವುದ್ ಸಿದ್ದಿಕಿ ಸಾಬ್ಅಬ್ದುಲ್ ರೌಫ್ ಸಾಬ್ ಉಮರ್ ಫಾರೂಕ್ ಅಬ್ದುಲ್ ರಹೀಮ್ ಶೇಕ್ ಫಾರಿದ್ ಉಮರಿ ಶೇಕ್ ಬಾಬು ಹುಸೇನ್ ನಸೀರ್_ಅಲಿ

ಖಋಔ ಹಾಗೂ ಖಜಒ ಏಖಉ ಸದಸ್ಯರು ಕಾರ್ಯಕರ್ತರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರ ನಡೆಗೆ ಯುವ ಕಾಂಗ್ರೆಸ್ ಟೀಕೆ – ಅಭಿವೃದ್ಧಿ ಬಿಟ್ಟು 'ಪಿಆರ್ ಸ್ಟಂಟ್' ಆರೋಪ



**ಸಿಹಿ ಕಹಿ ಸುದ್ದಿ,**

**ಉಡುಪಿ :** ರಸ್ತೆ ಗುಂಡಿಗಳೊಂದಿಗೆ ಸೆಲ್ಫಿ ತೆಗೆದು ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವ ಮೂಲಕ 'ಪ್ರಜಾಪ್ರಭುತ್ವ ರಕ್ಷಣೆ'ಯ ನಾಟಕವಾಡುತ್ತಿರುವ ಉಡುಪಿ ಜಿಲ್ಲಾ ಬಿಜೆಪಿ ಯುವ ಮೋರ್ಚಾದ ಅಧ್ಯಕ್ಷ ಪೃಥ್ವಿರಾಜ್ ಶೆಟ್ಟಿ ಅವರ ನಡೆಗೆ ಯುವ ಕಾಂಗ್ರೆಸ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಈ ಕುರಿತು ಉಡುಪಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಕರ್ನಾಟಕ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಜಿತ್ ಕುಮಾರ್ ಶೆಟ್ಟಿ, "ಬಿಜೆಪಿ ಯುವ ಮುಖಂಡರು ರೋಡ್ಶೋ ಪಿಆರ್ ಮಾಡುವುದನ್ನು ಬಿಟ್ಟು, ರಸ್ತೆಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಬಗ್ಗೆ ಯೋಚಿಸಬೇಕು" ಎಂದು ಹೇಳಿದ್ದಾರೆ.

ಜಿಲ್ಲೆಯಲ್ಲಿ ಐದು ಮಂದಿ ಬಿಜೆಪಿ ಶಾಸಕರಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಯಾವುದೇ ಪಕ್ಷಪಾತವಿಲ್ಲದೆ ಪ್ರತಿ ಶಾಸಕರಿಗೂ ?25 ಕೋಟಿ ಅನುದಾನ ನೀಡಿದೆ. ಈ ಹಣವನ್ನು ಬಳಸಿಕೊಂಡು ರಸ್ತೆ ಗುಂಡಿಗಳನ್ನು ಮುಚ್ಚಿಸಲು ನಿಮ್ಮ ಶಾಸಕರನ್ನು ಒತ್ತಾಯಿಸಿ. ಆಗ ಬೇಕಿದ್ದರೆ ಅವರೊಂದಿಗೆ ಸೆಲ್ಫಿ ತೆಗೆದುಕೊಳ್ಳಿ ಎಂದು ಅಜಿತ್ ಕುಮಾರ್ ಶೆಟ್ಟಿ ವ್ಯಂಗ್ಯವಾಡಿದರು.

**ಹಳೆಯ ಘಟನೆಗಳ ಸ್ಮರಣೆ:**

ಪೃಥ್ವಿರಾಜ್ ಶೆಟ್ಟಿ ಅವರು ಬಿಜೆಪಿ ಸೇರುವ ಮೊದಲು ಕಾಂಗ್ರೆಸ್‌ನಲ್ಲಿದ್ದಾಗ ಕುಂದಾಪುರದ ಹಾಲಾಡಿ ಶ್ರೀನಿವಾಸ ಶೆಟ್ಟಿಯವರನ್ನು ತೇಜೋವಧೆ ಮಾಡಿದ್ದರು ಎಂಬುದನ್ನು ನೆನಪಿಸಿದ ಅವರು, ಈಗ ಬಿಜೆಪಿ ನಿಷ್ಠೆ ಮತ್ತು ಪಾಠಗಳ ಬಗ್ಗೆ ಮಾತನಾಡುವುದು ನಾಟಕೀಯ ಎಂದು ಟೀಕಿಸಿದರು.

**ಗೋ ಪ್ರೇಮದ ಬಗ್ಗೆ ವ್ಯಂಗ್ಯ:**

ಇತ್ತೀಚೆಗೆ 'ಗೋ ಪ್ರೇಮ'ದ ಹೆಸರಿನಲ್ಲಿ ಸ್ಟಂಟ್‌ಗಳನ್ನು ಮಾಡುವವರಿಗೂ ತಿರುಗೇಟು ನೀಡಿದ ಅವರು, "ನಮ್ಮ ಯುವ ಕಾಂಗ್ರೆಸ್ ನಾಯಕರ ಮನೆಗಳಲ್ಲಿ ಮೂರು–ನಾಲ್ಕು ಗೋವುಗಳನ್ನು ಸಾಕಲಾಗುತ್ತಿದೆ. ನೈಜ ಸೇವಾ ಮನೋಭಾವ ಹೇಗಿರುತ್ತದೆ ಎಂದು ನೋಡಲು ಬೇಕಿದ್ದರೆ ನಮ್ಮ ಮನೆಗಳಿಗೆ ಬನ್ನಿ" ಎಂದು ಆಹ್ವಾನ ನೀಡಿದರು.

**ವರದಿ :ಆರತಿ ಗಿಳಿಯಾರು**

## ಕಿತ್ತೂರ ಚನ್ನಮ್ಮ ಮಹಿಳಾ ಬ್ಯಾಂಕ್‌ಗೆ .ನಿವ್ವಳ 76 ಲಕ್ಷ 96 ಸಾವಿರ ಲಾಭ

## ಕಿತ್ತೂರ ಚನ್ನಮ್ಮ ಮಹಿಳಾ ಬ್ಯಾಂಕ್ ಪ್ರಗತಿಗೆ ಗ್ರಾಹಕರ ಹಿತೈಷಿಗಳ ಸಹಕಾರ ಕಾರಣ




**ಬಾದಾಮಿ :** ನಮ್ಮ ಕಿತ್ತೂರ ಚನ್ನಮ್ಮ ಬ್ಯಾಂಕ್ ಕಳೆದ 27 ವರ್ಷಗಳಿಂದ ಸಂಘ ಸಾರ್ವಜನಿಕ ಸೇವೆಯಲ್ಲಿದ್ದು ಈ ವರ್ಷ 76 ಲಕ್ಷ 96 ಸಾವಿರ ಲಾಭವಾಗಿದ್ದು ಗ್ರಾಹಕರ ಹಾಗೂ ಹಿತೈಷಿಗಳ ಸಹಕಾರವೇ ಕಾರಣ ಎಂದು ಕಿತ್ತೂರ ಚೆನ್ನಮ್ಮ ಮಹಿಳಾ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷೆ ರೇಖಾ ಶಿರೂರ ಹೇಳಿದರು

ಅವರು ನಗರದ ಅಕ್ಕಮಹಾದೇವಿ ಕಲ್ಯಾಣ ಮಂಟಪದಲ್ಲಿಹಮ್ಮಿಕೊಂಡಮಹಿಳಾಸಹಕಾರಿ ಸಂಘದ 29 ನೇ ಸರ್ವ ಸಾಧಾರಣ ಸಭೆಯನ್ನು ಉದ್ಘಾಟಿಸಿ ಮಾತನಾಡಿ ಬಾದಾಮಿ, ಕುಳಗೇರಿ ಕ್ರಾಸ್, ಗುಳೇದಗುಡ್ಡ, ಗಜೇಂದ್ರಗಡ, ಕೆರೂರ ಸೇರಿದಂತೆ 5 ಶಾಖೆಗಳನ್ನು ಹೊಂದಿದ್ದು ಎಲ್ಲ ಶಾಖೆಗಳುಗಣಕೀಕೃತವಾಗಿದ್ದುಪ್ರಗತಿಯಲ್ಲಿವೆ, ಇನ್ನೂ 5 ಶಾಖೆಗಳಿಗೆ ಪರವಾನಗಿ ಸಲ್ಲಿಸಿದ್ದು ಅನುಮೋದನೆ ಮಾಡಿದ ತಕ್ಷಣ ಶಾಖೆಗಳನ್ನು ಉದ್ಘಾಟಿಸಲಾಗುವುದು ಎಂದು ಹೇಳಲು ಹರ್ಷವೆನಿಸುತ್ತಿದೆ, ಸಾಲಗಾರರು ಸಕಾಲದಲ್ಲಿ ಪಾವತಿಸಿದರೆ ಇನ್ನು ಹೆಚ್ಚಿನ ಲಾಭವಾಗುತ್ತದೆ ಎಂದರು

ಬ್ಯಾಂಕಿನ ಕಾರ್ಯ ನಿರ್ವಾಹಕ ಅಧಿಕಾರಿ ಲೀಲಾವತಿ ಬಾನದ ಆರ್ಥಿಕ ವರದಿವಾಚನ ಮಾಡಿದರು, ಪಂಚಮಸಾಲಿ ಸಮಾಜದ ಅಧ್ಯಕ್ಷ ಎಂ.ಎಸ್.ರುದ್ರಗೌಡ್ರ, ಉಪಾಧ್ಯಕ್ಷ ಬಸವರಾಜ ದೂಳಪ್ಪನವರ, ಸಮಾಜದ ಮುಖಂಡರಾದ ಮುತ್ತಣ್ಣ ಕಳ್ಳಿಗುಡ್ಡ, ಎಂ.ಡಿ ಯಲಿಗಾರ, ಬಿ.ಸಿ.ಬೆಳವಟಗಿ.

ಕಿತ್ತೂರ ಚನ್ನಮ್ಮ ವಿದ್ಯಾವರ್ಧಕ ಸಂಸ್ಥೆಯ ಅಧ್ಯಕ್ಷ ಡಾ.ಎನ್.ಡಿ ದೊಡ್ಡನಿಂಗಪ್ಪನವರ, ಮಾಜಿ ತಾ.ಪಂ ಸದಸ್ಯ ನಿಂಗಪ್ಪ ಹೊಸಮನಿ, ಶರಣಪ್ಪ ಮಾವಿನಮರದ, ನಿವೃತ್ತ ಪ್ರಾಚಾರ್ಯ ರವೀಂದ್ರ ಮೂಲಿಮನಿ, ಸಂಘದ ಉಪಾಧ್ಯಕ್ಷೆ ಮಂಜುಳಾ ನರಗುಂದ, ನಿರ್ದೇಶಕರಾದ ಹೊಸಗೌಡ್ರ, ಸಂಕನಗೌಡ್ರ, ನಿಲುಗಲ್, ನಾಯ್ಕರ, ನರಸಾಪೂರ, ಮೆಳ್ಳಿಗೇರಿ, ಕಾಟನಾಯ್ಕರ ಎನ್.ಎನ್.ಸೋಲ್ಲಾಪೂರ ಜಾನಪದ ಹಾಡಿನೊಂದಿಗೆ ಕಾರ್ಯಕ್ರಮ ಜರುಗಿತು, ಚನ್ನಮ್ಮ.ಆರ್.ನಿಲ್ಲುಗಲ್ ಸ್ವಾಗತಿಸಿ, ಜೆ.ಆಯ್.ಕೊಣ್ಣೂರ ನಿರೂಪಿಸಿ, ವಂದಿಸಿದರು.

# ಜಿಂದೇಶಾ ಸಂಘಕ್ಕೆ 60 ಲಕ್ಷ ಲಾಭ: ಪಠಾಣ




**ಗುಳೇದಗುಡ್ಡ :** ಪಟ್ಟಣದ ಜಿಂದೇಶಾ ಮದಾರ(ಜೆ.ಎಂ.)ಅಲ್ಪಸಂಖ್ಯಾತರ ಪತ್ತಿನ ಸಹಕಾರಿ ಸಂಘದ ನಿರ್ದೇಶಕ ಮಂಡಳಿಯ ಪ್ರಾಮಾಣಿಕ ಸೇವೆ, ಶೇರುದಾರರ, ಗ್ರಾಹಕರ ಸಹಕಾರದಿಂದ ಪ್ರಸಕ್ತ ವರ್ಷ 60 ಲಕ್ಷ ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಅನ್ವರಖಾನ ಪಠಾಣ ತಿಳಿಸಿದ್ದಾರೆ.

ಅವರು ಪಟ್ಟಣದ ಜಾಮೀಯಾ ಶಾದಿ ಮಹಲ್‌ದಲ್ಲಿ ಆಯೋಜನೆ ಮಾಡಿದ್ದ ಸಂಘದ 26ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯಲ್ಲಿ ಮಾತನಾಡಿ, ಗ್ರಾಹಕರು ಸಂಘದಿಂದ ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡಿ ಸಂಘದ ಬೆಳವಣಿಗೆಗೆ ಕೈಜೋಡಿಸಬೇಕು. ಸಂಘ ಶೇರುದಾರರ, ಗ್ರಾಹಕರ ಸಹಕಾರದಿಂದ ಉತ್ತಮ ಪ್ರಗತಿ ಸಾಧಿಸಿದೆ. ಪ್ರಸಕ್ತ ವರ್ಷ ಸಂಘ 64 ಲಕ್ಷ ರೂ.ನಿವ್ವಳ ಲಾಭ ಗಳಿಸಿದ್ದು, 26 ಕೋಟಿ 73 ಲಕ್ಷ ದುಡಿಯುವ ಬಂಡವಾಳ ಹೊಂದಿದೆ ಎಂದರು.

ಸಂಘವು 22 ಕೋಟಿ 25 ಲಕ್ಷ ಠೇವುಗಳನ್ನು ಹೊಂದಿದ್ದು, 2 ಕೋಟಿ 95 ಲಕ್ಷ ನಿಧಿಗಳನ್ನು ಹಾಗೂ 1 ಕೋಟಿ 52 ಲಕ್ಷ ಶೇರು ಬಂಡವಾಳ ಹೊಂದಿದೆ. ಸಂಘ ಉತ್ತಮ ಪ್ರಗತಿಯ ಸಾಧನೆ ಮಾಡಿದ್ದು ಅದಕ್ಕೆ ಎಲ್ಲ ಗ್ರಾಹಕರ, ಶೇರುದಾರರ ಸಹಕಾರ, ಪ್ರೇರಣೆ ಮುಖ್ಯ ಕಾರಣವಾಗಿದೆ ಎಂದು ಅಧ್ಯಕ್ಷ ಅನ್ವರಖಾನ ಪಠಾಣ ಹೇಳಿದರು. ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಮಲ್ಲಿಕಾರ್ಜುನ ಬನ್ನಿ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ ಮಾತನಾಡಿ, ಸಂಘ ಕಟ್ಟುವುದು ಸುಲಭ. ಅದನ್ನು ಮುನ್ನೆಡೆಸಿಕೊಂಡು ಹೋಗುವುದು ಬಹಳಷ್ಟು ಕಷ್ಟದ ಕಾರ್ಯವಾಗಿದೆ. ಹಿರಿಯರು ಸಂಘ ಕಟ್ಟಿ ಬೆಳೆಸಿಕೊಟ್ಟಿದ್ದಾರೆ. ಅದನ್ನು ನಿರ್ದೇಶಕ ಮಂಡಳಿ ಪ್ರಾಮಾಣಿಕ, ಸತ್ಯ, ಶುದ್ಧ ಕಾಯಕದೊಂದಿಗೆ ಹೆಮ್ಮರವಾಗಿ ಬೆಳೆಯಲು ಶ್ರಮಿಸಬೇಕೆಂದರು. ಇದೇಸಂದರ್ಭದಲ್ಲಿಸಂಘದಶೇರುದಾರರಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಉತ್ತಮ ಗ್ರಾಹಕ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ನಿರ್ದೇಶಕರಾದ ಸಂಘದ ಉಪಾಧ್ಯಕ್ಷ ಲಾಲಸಾಬ ಬಾಗವಾನ, ಆಯ್.ಎಂ.ಬಾಗವಾನ, ಆರ್.ಆರ್.ಕುದರಿ, ಕೆ.ಆಯ್.ಮಕಾನದಾರ, ಕೆ.ಎ.ಬಾಗವಾನ, ಸಿ.ಡಿ.ಪೆಂಡಾರಿ, ಎಂ.ಆರ್.ಮಕಾನದಾರ, ಎ.ಐ.ಅತ್ತಾರ, ಬಿ.ಎಂ.ಮಕಾನದಾರ, ಆರ್.ಬಿ.ಕಂಠಿಗೌಡ್ರ, ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಎಸ್.ಮಕಾನದಾರ, ಹಿರಿಯರಾದ ಎ.ಎಂ.ಮಕಾನದಾರ, ಎ.ಎಚ್.ಶಿವನಗುತ್ತಿ, ಸಿ.ಬಿ.ಹನಮಸಾಗರ, ಕೆ.ಬಿ.ಮಕಾನದಾರ, ಎನ.ಟಿ.ಅಬಕಾರಿ, ಎಂ.ಎಂ.ಬಾಗವಾನ, ವೈ.ಬಿ.ಬಾಗವಾನ, ಕೆ.ಎ.ಜಮಾದಾರ, ಎಫ್.ಕೆ.ಮಕಾನದಾರ, ಎಫ್.ಎಂ.ಬಾಗವಾನ ಇತರರು ಇದ್ದರು.

## ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ । ನನ್ನ ಮತ ನನ್ನ ಹಕ್ಕು

# ಬೈಕ್‌ರ್‍ಯಾಲಿಗೆ ಜಿಲ್ಲಾಧಿಕಾರಿ ಸಂಗಪ್ಪ ಚಾಲನೆ



**ಬಾಗಲಕೋಟೆ :** ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ಬಾಗಲಕೋಟೆ ಜಿಲ್ಲಾಡಳಿತ ಭವನದಿಂದ ಬೆಂಗಳೂರು ವಿಧಾನಸೌಧದವರೆಗೆ ಹಮ್ಮಿಕೊಂಡ ಬೈಕ್‌ರ್‍ಯಾಲಿಗೆಜಿಲ್ಲಾಧಿಕಾರಿ ಸಂಗಪ್ಪರವಿವಾರ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಸಮಾಜ–ಕಲ್ಯಾಣ ಹಾಗೂ ಯುವ ಸಬಲೀಕರಣ ಮತ್ತುಕ್ರೀಡಾ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಬೈಕ್‌ರ್‍ಯಾಲಿಗೆಚಾಲನೆನೀಡಿಮಾತ ನಾಡಿದಅವರುಪ್ರಜಾಪ್ರಭುತ್ವದಆಶಯಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ನನ್ನ ಮತ ನನ್ನ ಹಕ್ಕು ಎಂಬ ಘೋಷ ವ್ಯಾಕ್ಯದೊಂದಿಗೆ ಈ ವರ್ಷಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯನ್ನುಆಚರಿಸಲಾಗುತ್ತಿದೆ. ಮತದಾನದ ಮೌಲ್ಯದ ಮಹತ್ವವನ್ನು ಸಾರಲು ಬಾಗಲಕೋಟೆಯಿಂದ ಬೆಂಗಳೂರುವರೆಗೆ ಬೈಕ್‌ರ್‍ಯಾಲಿ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಯಶಸ್ವಿಯಾಗಲಿ ಎಂದು ಹಾರೈಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ಮಾತನಾಡಿ ಪ್ರಯಾಣ ಬಹಳ ದೂರವಿದೆ.ಜಿಲ್ಲೆಯ ಪ್ರತಿನಿಧಿಗಳಾಗಿ ಬೆಂಗಳೂರಿಗೆ ಬೈಕ್‌ರ್‍ಯಾಲಿ ಮೂಲಕ ಹೊರಟಿದ್ದಿರಿ.ಪ್ರಾರಂಭದಿಂದ ಮುಕ್ತಾಯ ದವರೆಗೆಜೋಶ್‌ಇರಬೇಕು.ಅದರಜೊತೆಗೆ ಸುರಕ್ಷತೆಯನ್ನು ಸಹ ಇರಬೇಕಾಗುತ್ತದೆ.ನಾವು ಯಾವಉದ್ದೇಶದಿಂದಹೊರಟಿರುವದನ್ನುಅರಿತುಅದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ನಮ್ಮ ಪ್ರಯಾಣಇರಬೇಕುಎಂದುರ್‍ಯಾಲಿಗೆ ಶುಭ ಹಾರೈಸಿದರು.

ಜಿಲ್ಲಾ ಪಂಚಾಯತ ಮುಖ್ಯಕಾರ್ಯ ನಿರ್ವಾಹಕಅಧಿಕಾರಿಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡ ಭಾರತ ಪ್ರಜಾಪ್ರಭುತ್ವ ಅತೀದೊಡ್ಡದೇಶವಾಗಿದೆ.ಪ್ರಜಾಪ್ರಭುತ್ವದ ಮೌಲ್ಯವನ್ನುಎಲ್ಲರೂಎತ್ತಿ ಹಿಡಿಯಬೇಕಿದೆ. ಪ್ರಜಾಪ್ರಭುತ್ವದಆಶಯವನ್ನು ಪ್ರತಿಯೊಬ್ಬರಿಗೂತಲುಪಿಸುವ ನಿಟ್ಟಿನಲ್ಲಿ ವಿವಿಧರೂಪದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅದರ ಭಾಗವಾಗಿ ಬೈಕ್‌ರ್‍ಯಾಲಿ ಕೂಡಾಒಂದಾಗಿದೆ.ಮತದಾನ ಹಕ್ಕಿನ ಬಗ್ಗೆ ಅರಿವು ಮೂಡಿಸಬೇಕಿದೆ.ನನ್ನ ಮತ ನನ್ನ ಹಕ್ಕು ಎಂಬ ಘೋಷವಾಕ್ಯ ಪ್ರಯಾಣದೂದ್ದಕ್ಕೂ ಎಲ್ಲರಿಗೂತಲುಪಿಸುವ ರೀತಿಯಲ್ಲಿ ನಿಮ್ಮಅಭಿಯಾನಇರಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿಜಿಲ್ಲಾ ಸಮಾಜ–ಕಲ್ಯಾಣಇಲಾಖೆಯ ಪ್ರಭಾರಿಉಪನಿರ್ದೇಶಕರಮೇಶಚವ್ಹಾಣ, ಯುವ ಸಬಲೀಕರಣ ಮತ್ತುಕ್ರೀಡಾಇಲಾಖೆಯ ಸಹಾಯಕನಿರ್ದೇಶಕಗುರುಪಾದಡೂಗನವರ ಸೇರಿದಂತೆ ಸಮಾಜಕಲ್ಯಾಣಇಲಾಖೆಯ ತಾಲೂಕಾಅಧಿಕಾರಿ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳುಇದ್ದರು.

ಪ್ರಾರಂಭದಲ್ಲಿ ಬೈಕ್ ರ್‍ಯಾಲಿಯಲ್ಲಿ ಪಾಲ್ಗೊಂಡರಾಹುಲ್ ಮಲಘಾನ, ಮೋಹನ ಕುಮಾರ, ಸುದೀಂದ್ರ ಕೆ, ಸಾಹಿಲ್ ಶಹ, ಮರಿಯಪ್ಪ,ಕಿರಣಎಂ,ರಾಘವೇಂದ್ರ,ಗುರುಕಿರಣ, ಗೋಪಾಲ ಕುಮಾರ, ಅಭಯಕುಮಾರಅವರಿಗೆ ಹೂಗಳನ್ನು ನೀಡಿ ಸ್ವಾಗತಿಸಿ ಪ್ರಮಾಣ ಪತ್ರವನ್ನು ವಿತರಣೆ ಮಾಡಲಾಯಿತು.ಈ ಬೈಕ ರ್‍ಯಾಲಿ ಮಧ್ಯಾಹ್ನ 1.30 ಗಂಟೆಗೆ ಹೊಸಪೇಟೆಗೆ ತೆರಳಿ ಸಂಜೆ 6ಕ್ಕೆ ಬೆಂಗಳೂರು ಕಂಠೀರವ ಸ್ಟೇಡಿಯೋಗೆತಲುಪಲಿ ಸೋಮವಾರಜರಗುವರಾಜ್ಯ ಮಟ್ಟದ ವಿಶ್ವ ಪ್ರಜಾಪ್ರಭುತ್ವ ದಿನಾಚರಣೆಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

## ರಾಷ್ಟ್ರೀಯ ಲೋಕ ಅದಾಲತ್ । ಒಂದೇ ದಿನದಲ್ಲಿ 32570 ಪ್ರಕರಣ ಇತ್ಯರ್ಥ

# ಆಸ್ತಿ ವಿವಾದ ಲೋಕ ಅದಾಲತ್‌ನಲ್ಲಿ ಇತ್ಯರ್ಥ



**ಬಾಗಲಕೋಟೆ:** ಕಳೆದ 2017 ರಿಂದಕುಟುಂಬದ ಮಧ್ಯ ನಡೆದ ಆಸ್ತಿವಿವಾದಕ್ಕೆ ಸಂಬಂಧಿಸಿದ ಪ್ರಕರಣವನ್ನು ಶನಿವಾರ ನಡೆದ ಲೋಕ ಅದಾಲತ್‌ನಲ್ಲಿರಾಜೀ ಸಂಧಾನ ಮಾಡುವ ಮೂಲಕ ಇತ್ಯರ್ಥಪಡಿಸಲಾಯಿತು.

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂರಾಜ್ಯಕಾನೂನುಸೇವೆಗಳಪ್ರಾಧಿಕಾರದ ನಿರ್ದೇಶನದಂತೆ ಬಾಗಲಕೋಟೆಜಿಲ್ಲಾ ನ್ಯಾಯಾಲಯದಲ್ಲಿ ನಡೆದ ಲೋಕ ಅದಾಲತ್‌ನಲ್ಲಿಕುಟುಂಬದ ಮಧ್ಯ ಆಸ್ತಿಗೆ ಸಂಬಂಧಿಸಿದಂತೆ, ಬಾಲಕೋಟೆಜಿಲ್ಲೆಯ ಕೆಳ ಹಂತದ ನ್ಯಾಯಾಲಯದಿಂದ ಪ್ರಧಾನಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಪ್ರಕರಣಬಂದಿತ್ತು. ಕುಟುಂಬಸ್ಥರ ಮಧ್ಯರಾಜೀ ಸಂಧಾನದ ಮೂಲಕ ಪ್ರಕರಣವನ್ನುಇತ್ಯರ್ಥಪಡಿಸಲಾಯಿತು. ಪ್ರಧಾನಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದಎನ್.ವಿ.ವಿಜಯ್‌ಅವರ ನೇತೃತ್ವದಲ್ಲಿ ನಡೆದ ಲೋಕ ಅದಾಲತ್‌ನಲ್ಲಿ ಬಾಕಿ ಇರುವ8533 ಪೈಕಿ 5085 ಹಾಗೂ ವಾಜ್ಯ ಪೂರ್ವ ಪ್ರಕರಣಗಳಲ್ಲಿ 29014 ಪೈಕಿ 27485 ಪ್ರಕರಣ ಸೇರಿಒಟ್ಟು32570 ಪ್ರಕರಣಗಳನ್ನು ರಾಜಿ ಸಂದಾನ ಮೂಲಕ ಇತ್ಯರ್ಥಪಡಿಸಲಾಯಿತು. ಅದಾಲತ್‌ನಲ್ಲಿಒಟ್ಟು137.93ಕೋಟಿ ರೂ.ಗಳ ಪ್ರಕರಣದ ಮೊತ್ತವಾಗಿತ್ತು. ಜಿಲ್ಲಾ ನ್ಯಾಯಾಲಯದಲ್ಲಿ ಬಾಕಿ ಇರುವ2551 ಪ್ರಕರಣಗಳ ಪೈಕಿ 1490, ಬೀಳಗಿ ನ್ಯಾಯಾಲಯದಲ್ಲಿ 190 ಪೈಕಿ 112, ಮುಧೋಳ ನ್ಯಾಯಾಲಯದಲ್ಲಿ 465 ಪೈಕಿ 450, ಬನಹಟ್ಟಿ ನ್ಯಾಯಾಲಯದಲ್ಲಿ 1648 ಪೈಕಿ 532, ಹುನಗುಂದ ನ್ಯಾಯಾಲಯದಲ್ಲಿ 1301 ಪೈಕಿ 1037, ಇಲಕಲ್ಲ ನ್ಯಾಯಾಲಯದಲ್ಲಿ 438 ಪೈಕಿ 355, ಬಾದಾಮಿ ನ್ಯಾಯಾಲಯದಲ್ಲಿ 662 ಪೈಕಿ 564, ಜಮಖಂಡಿ ನ್ಯಾಯಾಲಯದಲ್ಲಿ 1248 ಪೈಕಿ 534 ಹಾಗೂ ಎಫ್.ಟಿ.ಎಸ್.ಸಿ ಕೋರ್ಟನಲ್ಲಿ 30 ಪೈಕಿ 1 ಪ್ರಕರಣಗಳನ್ನು ಇತ್ಯರ್ಥಪಡಿಸಲಾಯಿತು.

ವಾಜ್ಯಪೂರ್ವ ಪ್ರಕರಣಗಳಲ್ಲಿಬ್ಯಾಂಕಿಗೆ ಸಂಬಂಧಿಸಿದ 1591 ಪೈಕಿ 62 ಪ್ರಕರಣಗಳಿಗೆ ಒಟ್ಟು1.03ಕೋಟಿ ರೂ.ಗಳಿಗೆ ಇತ್ಯರ್ಥಗೊಂಡರೆ, ವಿದ್ಯುತಬಿಲ್‌ಗೆ ಸಂಬಂಧಿಸಿದ 165 ಪೈಕಿ 165ಇತ್ಯರ್ಥಗೊಂಡು3.23 ಲಕ್ಷರೂ, ನೀರಿನಕರಕ್ಕೆ ಸಂಬಂಧಿಸಿದ 2418 ಪೈಕಿ 2418ಕ್ಕೆ 1ಕೋಟಿರೂ, ಸಂಚಾರಿಉಲ್ಲಂಘನೆಗೆ ಸಂಬಂಧಿಸಿದ 9250 ಪೈಕಿ 9250ಕ್ಕೆ 30.94 ಲಕ್ಷರೂ, ಆಸ್ತಿ ತೆರಿಗೆ ಸಂಬಂಧಿಸಿದಂತೆ 15519 ಪೈಕಿ 15519 ಪ್ರಕರಣಗಳನ್ನು 7.99ಕೋಟಿ ರೂ.ಗಳಿಗೆ ಇತ್ಯರ್ಥಪಡಿಸಲಾಯಿತು.

ಲೋಕ ಅದಾಲತ್ ಶಿಬಿರದಲ್ಲಿ ಹೆಚ್ಚುವರಿಜಿಲ್ಲಾ ಮತ್ತು ಸತ್ರ ಹಾಗೂ ಎಫ್‌ಟಿಎಸ್‌ಸಿ–1 ನ್ಯಾಯಾಧೀಶ ಪಿ.ಎಸ್.ಸದರ ಜೋಶಿ,2ನೇ ಹೆಚ್ಚುವರಿಜಿಲ್ಲಾ ಮತ್ತು ಸತ್ರ ನ್ಯಾಯಾಧಿಶಜಿ.ಎ.ಮೂಲಿಮನಿ,4ನೇಹೆಚ್ಚುವರಿಜಿಲ್ಲಾ ಸತ್ರ ನ್ಯಾಯಾಧೀಶರಾಜೇಶಕರಣಮ್ ಕೆ, 5ನೇ ಹೆಚ್ಚುವರಿಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಮೇಶ ಎಕಬೋಟೆ, ಜಿಲ್ಲಾ ನ್ಯಾಯಾಧೀಶರುಮತ್ತುಕುಟುಂಬ ನ್ಯಾಯಾಧೀಶ ಕೃಷ್ಣಮೂರ್ತಿಪಡಸಲಗಿ, ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶ ಮಹೇಶ ಪಾಟೀಲ, 1ನೇಹೆಚ್ಚುವರಿಹಿರಿಯ ದಿವಾಣಿ ನ್ಯಾಯಾಧಿಶ ಸುದೀಪ ನಾಯಕ, 2ನೇ ಹೆಚ್ಚುವರು ಹಿರಿಯ ದಿವಾಣಿ ನ್ಯಾಯಾಧೀಶರಾಜಶೇಖರ ತಿಳಗಂಜಿ, ಪ್ರಧಾನ ದಿವಾಣಿನ್ಯಾಯಾಧೀಶಮುರಗೇಂದ್ರತುಬಾಕೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿಇದ್ದರು.

# ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ವಿಳಂಬ: ಸೇವಾ ಭದ್ರತೆಗಾಗಿ ಶಿಕ್ಷಣ ಸಚಿವರಿಗೆ ಮನವಿ

**ವರದಿ:ಲಾಲಸಾಬ ಸವಾರಗೋಳ**

**ಮುದ್ದೇಬಿಹಾಳ :** ರಾಜ್ಯಾದ್ಯಂತ ಪ್ರಮುಖ ಜ್ವಲಂತ ಸಮಸ್ಯೆಯಾದ ಅತಿಥಿ ಉಪನ್ಯಾಸಕರ ನೇಮಕಾತಿಯಲ್ಲಿ ವಿಳಂಬ ಮಾಡುತ್ತಿರುವ ರಾಜ್ಯ ಸರ್ಕಾರದ ನೀತಿ ಖಂಡಿಸಿ ಇಂದು ಮುದ್ದೇಬಿಹಾಳ ತಾಲ್ಲೂಕಿನ ಅತಿಥಿ ಉಪನ್ಯಾಸಕರ ಸಂಘದಿಂದ ಮಾನ್ಯ ತಹಶೀಲ್ದಾರ ಮುಖಾಂತರ ಉನ್ನತ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹಿರಿಯ ಅತಿಥಿ ಉಪನ್ಯಾಸಕರು ಮುಸ್ತಾಕ್ ಭಾಗವಾನ್ ಮಾತನಾಡಿ ಮಾನ್ಯ ಹೈಕೋರ್ಟ್ ಆದೇಶವು ಸಹ ನೀಡಿದಾಗಿದೆ ಹೈಕೋರ್ಟ್ ಆದೇಶ ಬಂದು ವಾರವಾದರೂ ಸಹ ಯಾವುದೇ ರೀತಿಯ ಪ್ರತಿಕ್ರಿಯೆ ಸರ್ಕಾರದಿಂದ ಬಂದಿಲ್ಲ ಇದು ಬೇಸರದ ವಿಷಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಳೆದ 45 ದಿನಗಳಿಂದ ಅತಿಥಿ ಉಪನ್ಯಾಸಕರು ಉದ್ಯೋಗವಿಲ್ಲದೇ ತೊಂದರೆ ಅನುಭವಿಸುತ್ತಿದ್ದು ಕಳೆದ 15, 20 ವರ್ಷಗಳಿಂದ ಇದೆ



ಉಪನ್ಯಾಸಕ ಹುದ್ದೆಯಲ್ಲಿ ಅವಲಂಬಿತರಾಗಿದ್ದು ಮತ್ತು ಅವ-ರಿಗೆ ಉದ್ಯೋಗವಿಲ್ಲದೆ ಅವರ ಜೀವನ ನಿರ್ವಹಣೆ ಮಾಡುವುದು ಕಷ್ಟಕರವಾಗಿದೆ. ಉದ್ಯೋವಿಲ್ಲದೆ ಕೇಲವು ಅತಿಥಿ ಉಪನ್ಯಾಸಕರು ಈಗಾಗಲೇ ಹೃದಯಘಾತ ಮತ್ತು ಇನ್ನಿತರ ಕಷ್ಟಗಳಿಂದ ನಿಧನ ಹೊಂದಿದ್ದಾರೆ ಅವರ ಕುಟುಂಬಗಳು ಇಂದು ಅನಾಥವಾಗಿವೆ. ಇದೆ ರೀತಿ ಅತಿಥಿ ಉಪನ್ಯಾಸಕರ ನೇಮಕಾತಿ ವಿಳಂಬ ಮಾಡಿದರೆ ಜೀವನ ನಿರ್ವಹಣೆ ಮಾಡುವುದು ತುಂಬಾ ಕಷ್ಟಕರವಾಗುತ್ತದೆ ಎಂದರು.

ಶಾ ಸೋಗಮಲ್ ಪೀರಜಿ ಒಸ್ವಾಲ್ ಮಾತನಾಡಿಪದವಿ ಕಾಲೇಜುಗಳಲ್ಲಿ ಶೇಕಡಾ 70ರಷ್ಟು ಅತಿಥಿ ಉಪನ್ಯಾಸಕರನ್ನ ಅವಲಂಬಿಸಿದ್ದು ಇದ-ರಿಂದಾಗಿ ವಿದ್ಯಾರ್ಥಿಗಳಿಗೆ ಪಾಠಗಳ ಬೋಧನೆ ಇಲ್ಲದೇ ವಿದ್ಯಾರ್ಥಿಗಳು ಶಿಕ್ಷಣದಿಂದ ಕುಂಠಿತಗೊಂಡಿದ್ದಾರೆ. ಆದಕಾರಣ ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಗಉಅ ಮತ್ತು ಓಂಟಿ ಗಉಅ ಎಂಬ ಬೇದಭಾವ ಮಾಡದೇ ಅದಷ್ಟು ಬೇಗನೆ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿ ಅವರಿಗೆ ಈ ಮುಖಾಂತರ ಸೇವಾ ಭದ್ರತೆ ನೀಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮುಸ್ತಾಕ್ ಭಾಗವಾನ. ರವೀಂದ್ರ ನಂದಪ್ಪವರ್. ಹಳ್ಳಪ್ಪ ದಾಸರ್. ಶ್ರೀಶೈಲ ಉಪ್ಪಾರ್. ವೈ ಕೆ ಗುಂಡಕರಜಗಿ. ಪ್ರದೀಪ್ ಜಗ್ಗಲ್. ಸಂತೋಷ್ ಹೊಸಮನಿ. ಗಿರಿಜಪ್ಪ ವಾಗಣಗೇರಿ. ತಾಲೂಕಿನ ಇನ್ನು ಹಲವಾರು ಅತಿಥಿ ಉಪನ್ಯಾಸಕರು ಉಪಸ್ಥಿತರಿದ್ದರು.

**ವಿವಿಧ ಬೇಡಿಕೆಗಳು :** 1) ಕೆಂದ್ರದ ಯುಜಿಸಿ ನಿಯಮಾವಳಿ ತಿದ್ದುಪಡಿ ಮಾಡಿ ತಾತ್ಕಾಲಿಕ ನೌಕರರನ್ನು ಖಾಯಂ ನೌಕರರನ್ನಾಗಿ ನೇಮಕ ಮಾಡಿಕೊಳ್ಳಲು ನಿಯಮಾವಳಿ ತಿದ್ದುಪಡಿ ಮಾಡಬೇಕು. 2) ಇದರನ್ವಯ ಉನ್ನತ ಶಿಕ್ಷಣ ಇಲಾಖೆಯ ಅತಿಥಿ ಉಪನ್ಯಾಸಕರಿಗೆ 5,8.10 ವರ್ಷ ಕೆಲಸ ಮಾಡಿದವರಿಗೆ ಕಾಯಮಾತಿ ಯೋಜನೆ ಜಾರಿಗೆ ತರಬೇಕು 3) ಪ್ರತಿ ವರ್ಷ ಅತಿಥಿ ಉಪನ್ಯಾಸಕರಿಗೆ ಕೌನ್ಸಲಿಂಗ ನೇಮಕದಲ್ಲಿ ತೊಂದರೆ ಆಗುತ್ತಿದ್ದು ಖಾಲಿ ಇರುವ ಹುದ್ದೆಗಳಿಗೆ ಸೇವೆಯಲ್ಲಿ ಇರುವವರನ್ನೇ ನೇಮಕ ಮಾಡಿಕೊಳ್ಳಬೇಕು. 4) ಹೊಸದಾಗಿ ಸಿಇಟಿ ಮೂಲಕ ಹುದ್ದೆಗಳನ್ನು ಕರೆಯದೆ ಸೇವೆಯಲ್ಲಿ ಇರುವ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಬೇಕು. ಹೊಸದಾಗಿ ಹುದ್ದೆ ಕರೆಯಬಾರದು. 5) ಪ್ರಸಕ್ತ ರಾಜ್ಯದಲ್ಲಿ ಉದ್ಯೋಗ ನೇಮಕಾತಿ ಕಾನೂನು ಕಾನೂನುಗಳು ಅವೈಜ್ಞಾನಿಕ ಆಗಿದೆ ಕಾರಣ ವಿವಿಧ ಇಲಾಖೆಗಳಲ್ಲಿ ದುಡಿಯುತ್ತಿರುವ ಅರ್ಹ, ಅನುಭವಿ ಹಾಗೂ ವಯೋಮಿತಿ ತಕ್ಕಂತೆ ನೇಮಕಾತಿ ಮಾಡುವ "ಉದ್ಯೋಗ ನೇಮಕಾತಿ ಯೋಜನೆ" (Scheme of Appointment) ಕಾಯ್ದೆ ಜಾರಿಗೆ ತರಬೇಕು.

## ಪ್ರಜಾಪ್ರಭುತ್ವ ದಿನಾಚರಣೆ | ಅಂಬೇಡ್ಕರ ಪುತ್ಥಳಿಗೆ ಹೂ ಮಾಲಾರ್ಪಣೆ

# ಪ್ರಜಾಪ್ರಭುತ್ವ ಗಟ್ಟಿಗೊಳಿಸುವ ಕಾರ್ಯವಾಗಲಿ: ಸಂಸದ ಗದ್ದಿಗೌಡರ





**ಬಾಗಲಕೋಟೆ :** ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿರುವ ಮೌಲ್ಯ ಹಾಗೂ ವಿಚಾರಗಳನ್ನು ಮುಂದಿನ ಪೀಳಿಗೆಗೆ ಗೊತ್ತುಪಡಿಸುವ ಮೂಲಕ ವ್ಯವಸ್ಥೆಯನ್ನು ಮತ್ತಷ್ಟು ಗಟ್ಟಿಗೊಳಿಸುವ ಕಾರ್ಯವಾಗಬೇಕಿದೆ ಎಂದು ಸಂಸದ ಪಿ.ಸಿ.ಗದ್ದಿಗೌಡರ ಹೇಳಿದರು. ಜಿಲ್ಲಾಡಳಿತ, ಜಿಲ್ಲಾಪಂಚಾಯತಹಾಗೂಸಮಾಜಕಲ್ಯಾಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಾವೆಲ್ಲರೂ ಸಂವಿಧಾನದಲ್ಲಿರುವ ಮೌಲ್ಯಗಳಿಗೆ ಒತ್ತುಕೊಟ್ಟು ಜೀವನ ಸಾಗಿಸುವಂತಾಗುವ ಉದ್ದೇಶದಿಂದ ಪ್ರತಿ ವರ್ಷ ಸೆಪ್ಟೆಂಬರ 15 ರಂದು ಪ್ರಜಾಪ್ರಭುತ್ವ ದಿನವನ್ನಾಗಿ ಆಚ-ರಿಸಲಾಗುತ್ತಿದೆ ಎಂದರು. ವಿವಿಧತೆಯಲ್ಲಿ ಏಕತೆ ಹೊಂದಿದ ದೇಶ ನಮ್ಮದಾಗಿದೆ ಎಂದರು.

ರಾಜ್ಯಸಭಾಸದಸ್ಯನಾರಾಯಣಸಾಭಾಂಡಗೆ ಮಾತನಾಡಿ ನಮ್ಮ ದೇಶಕ್ಕೆ ಡಾ.ಬಿ.ಆರ್. ಅಂಬೇಡ್ಕರ ನೀಡುವ ಮಹಾನ್ ಕೊಡುಗೆ ಸಂವಿಧಾನ. ಇದರ ಆಧಾರದ ಮೇಲೆ ಆಡಳಿತ ಯಂತ್ರ ನಡೆಸಲಾಗುತ್ತಿದೆ. ಎಲ್ಲರಿಗೂ ಸಮಾನತೆಯ ಹಕ್ಕುಗಳನ್ನು ಕೊಟ್ಟಿರುವುದು ನಮ್ಮ ಸಂವಿಧಾನ. ನಾವು ಹಕ್ಕುಗಳ ಬಗ್ಗೆ ಮಾತನಾಡುತ್ತಿದ್ದೇವೆ ಹೊರತು ಕರ್ತವ್ಯದ ಬಗ್ಗೆ ಮಾತನಾಡುತ್ತಿಲ್ಲ. ಹಕ್ಕುಗಳು ಯಾವಾಗ ಸೀಗುತ್ತವೆ ಎಂದರೆ ಕರ್ತವ್ಯ ಮಾಡಿದಾಗ ಮಾತ್ರ. ಸಮಾನತೆ ಎಂಬುದು ನಮ್ಮ ರಕ್ತದಲ್ಲಿಯೇ ಇದ್ದು, ಅದನ್ನು ಕಲಿಸಿಕೊಡುವ ಅಗತ್ಯವಿಲ್ಲ. ನಾವು ಮಾಡುವ ಕೆಲವೊಂದು ತಪ್ಪುಗಳಿಂದ ಸಮಾಜದಲ್ಲಿ ಗೊಂದಲ ಉಂಟಾಗುತ್ತಿದೆ. ಅದನ್ನು ಯಾರು ಮಾಡಬಾರದು ಎಂದರು.

ಜಿಲ್ಲಾಧಿಕಾರಿ ಸಂಗಪ್ಪ ಮಾತನಾಡಿ ಪ್ರಜಾಪ್ರಭುತ್ವ ವ್ಯವಸ್ಥೆ ಅಂದರೆ ಕೇವಲ ಆಡಳಿತ ವ್ಯವಸ್ಥೆ ಅಲ್ಲ, ಅದು ನಮ್ಮ ಸ್ವಾತಂತ್ರ್ಯದ ಜೀವಾಳ, ಸಮಾನತೆಯ ನಂಬಿಕೆ ಮತ್ತು ನ್ಯಾಯದ ದಾರಿಯಾಗಿದೆ. ಮತದಾನ ಕೇವಲ ಹಕ್ಕು ಮಾತ್ರವಲ್ಲ ಅದು ಕರ್ತವ್ಯ, ಹೊಣೆಗಾರಿಕೆ ಮತ್ತು ಪ್ರಜಾಸತ್ತಾತ್ಮಕ ಶಕ್ತಿಯಾಗಿದೆ. ನಮ್ಮ ಮತದಾನದ ಹಕ್ಕು ನಮ್ಮ ಸಮಾನತೆಯ ಚಿಹ್ನೆ,ಸ್ವಾತಂತ್ರ್ಯದಪ್ರತೀಕ,ಜೀವಾಳವಾಗಿದೆ. ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಯ ಭಾರತವನ್ನು ಕಟ್ಟುವ ಕನಸು ಅಂಬೇಡ್ಕರ ಹೊಂದಿದ್ದರು. ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದರು.

ಶಾಸಕರು ಹಾಗೂ ಬಿಟಿಡಿಎ ಅಧ್ಯಕ್ಷ ಎಚ್.ವಾಯ್.ಮೇಟಿ ಮಾತನಾಡಿ ದೇಶಕ್ಕೆ ಅರ್ಥಪೂರ್ಣವಾದ ಸಂವಿಧಾನವನ್ನು ಡಾ.ಬಿ.ಆರ್.ಅಂಬೇಡ್ಕರ ನೀಡಿದ್ದು, ಅದರಲ್ಲಿ ಅಡಕವಾಗಿರುವ ಆಶಯ, ಅದರ ಹಿಂದೆ ಇರುವ ಸಮಾಜಿಕ ಕಳಕಳಿ, ಸಮಾನತೆ, ಭಾತೃತ್ವ ಸೇರಿದಂತೆ ಹತ್ತು ಹಲವಾರು ಮೌಲ್ಯಗಳನ್ನು ನಾವೆಲ್ಲರೂ ಅನುಸರಿಬೇಕು ಎಂದರು. ಉಪನ್ಯಾಸಕರಾಗಿ ಆಗಮಿಸಿದ್ದ ನವನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥ ಸಂಪತ್ ಲಮಾಣಿ ಮಾತನಾಡಿ ಪ್ರಜಾಪ್ರಭುತ್ವ ಒಂದು ಜೀವನದ ಶೈಲಿಯಾಗಿದೆ ಎಂದರು.

ಪ್ರಾರಂಭದಲ್ಲಿ ಸಂವಿಧಾನ ಪೀಠಿಕೆಯನ್ನು ಬೋಧಿಸಲಾಯಿತು. ಅನುಪಸ್ಥಿತಿಯಲ್ಲಿದ್ದ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಅವರ ಸಂದೇಶವನ್ನು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ಓದಿದರು. ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷ ಸವಿತಾ ಲೆಂಕನ್ನವರ, ಬುಡಾದ ಅಧ್ಯಕ್ಷ ರಜಾಕ್ ಬೇನೂರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ರಮೇಶ ಚವ್ಹಾಣ ಸೇ-ರಿದಂತೆ ಇತರರು ಉಪಸ್ಥಿತರಿದ್ದರು.

## ಪ್ರಜಾಪ್ರಭುತ್ವ ದಿನಾಚರಣೆ

# ಸೈಕಲ್ ಜಾಥಾ, ಮ್ಯಾರಥಾನ್‌ಗೆ ಚಾಲನೆ



**ಬಾಗಲಕೋಟೆ:**ಪ್ರಜಾಪ್ರಭುತ್ವದಿನಾಚರಣೆಅಂಗವಾಗಿ ಹಮ್ಮಿಕೊಂಡ ಸೈಕಲ್ ಜಾಥಾ ಹಾಗೂ ಮ್ಯಾರಥಾನ್‌ಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎನ್.ವಿ.ವಿ-ಜಯ್ ಹಾಗೂ ಜಿಲ್ಲಾಧಿಕಾರಿ ಸಂಗಪ್ಪ ಜಂಟಿಯಾಗಿ ಚಾಲನೆ ನೀಡಿದರು.

ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಸಮಾಜ ಕಲ್ಯಾಣ ಇಲಾಖೆ ಹಾಗೂ ಕ್ರೀಡಾ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಸೈಕಲ್ ಜಾಥಾ ನವನಗರದ ಕಾಳಿದಾಸ ಶಿಕ್ಷಣ ಸಂಸ್ಥೆಯ ಮೈದಾನದಿಂದ ಪ್ರಾರಂಭವಾಗಿ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಜಿಲ್ಲಾಡಳಿತ ಭವನಕ್ಕೆ ಮುಕ್ತಾಯಗೊಂಡಿತು.

ಮ್ಯಾರಥಾನ್ ಸಹ ಕಾಳಿದಾಸ ಶಿಕ್ಷಣ ಸಂಸ್ಥೆಯಿಂದ ಪ್ರಾರಂಭವಾಗಿ ವಿದ್ಯಾಗಿರಿ ಸರ್ಕಲ್ ಮಾರ್ಗವಾಗಿ ಬಾಗಲಕೋಟೆ ಪಟ್ಟಣ ಅಭಿವೃದ್ದಿ ಪ್ರಾಧಿಕಾರಕ್ಕೆ ಮುಕ್ತಾಯಗೊಂಡಿತು. ಸೈಕಲ್‌ಗಳಲ್ಲಿ ನನ್ನ ಮತ ನನ್ನ ಹಕ್ಕು ಎಂಬ ಘೋಷವಾಕ್ಯದ ಫಲಕಗಳನ್ನು ಪ್ರದರ್ಶಿಸಲಾಯಿತು. ಬಿಳಿ ಬಣ್ಣದ ಟೀಶರ್ಟ ಧ-ರಿಸಿದ್ದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾಥ-ರ್ ಗೋಯಲ್, ಸಮಾಜ ಕಲ್ಯಾಣ ಇಲಾಖೆಯ ಪ್ರಭಾರಿ ಉಪನಿರ್ದೇಶಕ ರಮೇಶ ಚವ್ಹಾಣ, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ, ಬಿಟಿಡಿಎ ಮುಖ್ಯ ಅಭಿಯಂತರ ಚಂದ್ರಹಾಸ ಬಂಡಿ, ಕೆಬಿಜೆಎನ್ಎಲ್ ಮುಖ್ಯ ಅಭಿಯಂತರ ಡಿ.ಬಸವರಾಜ, ಕೆಪಿಟಿಸಿಎಲ್ ಮುಖ್ಯ ಅಭಿಯಂತರ ಕಾಶಿನಾಥ ಹಿರೇಮಠ ಸೇರಿದಂತೆ ಇತರೆ ಗಣ್ಯಮಾನ್ಯರು ಪಾಲ್ಗೊಂಡಿದ್ದರು.

# ನೇಪಾಳದ ಜೆನ್-ಝಿ ಕ್ರಾಂತಿ, ನಮಗೆ ಎಚ್ಚರಿಕೆಯ ಕರೆಗಂಟೆ

ಭಾರತದ ನೆರೆಯ ರಾಷ್ಟ್ರಗಳಲ್ಲಿ ಇತ್ತೀಚೀನ ಸಮಯದಲ್ಲಿ ಬಹಳಷ್ಟು ಅಲ್ಲೋಲ ಕಲ್ಲೋಲವೆನಿಸುವ ರಾಜಕೀಯ ಬದಲಾವಣೆ, ಆರ್ಥಿಕ ಅಧಃಪತನ, ಸಾಮಾಜಿಕದುಸ್ಥಿತಿ,ಭುಗಿಲೆದ್ದಹಿಂಸಾಚಾರ, ಗಲಭೆಗಳು ಮೇಲ್ನೋಟಕ್ಕೆ ಅಲ್ಲಿಯ ಆಡಳಿತ ವೈಫಲ್ಯವೆಂದು ಕಂಡರೂ, ಇದರ ಹಿಂದೆ ಅಗಾಧವಾದ ಗೌಪ್ಯ ವಿದೇಶಿ ಕೈವಾಡಗಳು ಕಾರ್ಯನಿರ್ವಹಿಸುತ್ತಿರುವುದನ್ನು ಕಡೆಗಣಿಸುವಂತಿಲ್ಲ. ಇದೆಲ್ಲಾ ನಮಗೆ ಎಚ್ಚ-ರಿಕೆಯ ಗಂಟೆಯಾಗಿದೆ.

ಪಾಪಿ ಪಾಕಿಸ್ತಾನ ಆರ್ಥಿಕ ಸಂಕಟದಿಂದ ನರಳಾಡುತ್ತಿದೆ. ಜೀಹಾದಿ ಬಾಂಗ್ಲಾದೇಶ ಕೂಡ ಇದರ ಹೊರತೇನಲ್ಲ. ಶ್ರೀಲಂಕಾದಲ್ಲೂ ಆರ್ಥಿಕ ದುಸ್ಥಿತಿ. ಈಗ ನೇಪಾಳದಲ್ಲಿ ಕ್ಷಿಪ್ರ ಕ್ರಾಂತಿ. ಒಟ್ಟಿನಲ್ಲಿ ಭಾರತದ ಸುತ್ತ ಮುತ್ತಲಿನ ರಾಷ್ಟ್ರಗಳಲ್ಲಿ ಅರಾಜಕತೆ. ಇದೆಲ್ಲಾ ಭಾರತವನ್ನು ವಿಶ್ವ ಗುರುವಾಗಿ ಬೆಳೆಯುವುದನ್ನು ತಡೆಯಲು ದೊಡ್ಡಣ್ಣ ಮಾಡುತ್ತಿರುವ ಕುತಂತ್ರವೇ ಎಂಬ ಸಂದೇಹ ಬರುವುದರಲ್ಲಿ ಸಂಶಯವಿಲ್ಲ. ನೆರೆಯ ದೇಶಗಳಲ್ಲಿ ಗಲಭೆಗಳಾದಾಗ ಅಲ್ಲಿನ ಪ್ರಜೆಗಳು ಅಕ್ರಮವಾಗಿ ನಮ್ಮ ದೇಶವನ್ನು ನುಸುಳುವ ಪ್ರಯತ್ನ ಮಾಡುತ್ತಾರೆ. ಅವರ ಉದ್ದೇಶಗಳು, ಕಾರ್ಯಚಟುವಟಿಕೆಗಳು, ಯೋಜನೆ, ಯೋಚನೆಗಳ ಬಗ್ಗೆ ಊಹಿಸುವುದು ಅಸಾಧ್ಯವಾಗಿದೆ. ಬಾಂಗ್ಲಾದೇಶದಲ್ಲಿ ನಡೆದ ಗಲಭೆಗಳಲ್ಲಿ ಹಿಂದೂ ಧರ್ಮಿಯರನ್ನು ಕಂಡ ಕಂಡ ಕಡೆಯೆಲ್ಲ, ತಳಿಸಿದರು. ಬಲವಂತವಾಗಿ ಮತಾಂತರ ಮಾಡಿದರು. ವಿರೋಧಿಸಿದವರನ್ನುದಮನಗೊಳಿಸಿದರು. ಹಾಗೆಯೇ ಭಾರತವನ್ನು ಯುದ್ಧಕ್ಕೆ ಪ್ರಚೋದಿಸಿದರು. ಇದೆಲ್ಲಾ ಚಟುವಟಿ-ಕೆಗಳನ್ನು ಕೂಲಂಕುಷವಾಗಿ ಗಮನಿಸುತ್ತಿದ್ದ ಭಾರತ ತಟಸ್ಥ ನೀತಿಯನ್ನು ಅನುಸರಿಸಿತು. ಇದರಿಂದ ಹಿನ್ನಡೆ ಕಂಡ ಅಗೋಚರ ವಿದೇಶಿ ದಾಳಿಕೋರರ ಮುಂದಿನ ಅಸ್ತ್ರವಾಗಿ ನೇಪಾಳ ಸಿಲುಕಿದೆಯೇ ಎಂಬ ಗುಮಾನಿ.





ನೇಪಾಳದ ಯುವಜನತೆ ತಮ್ಮ ಸಮಸ್ಯೆಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದುದ್ದನ್ನು ತಡೆಯಲು ಅಲ್ಲಿನ ಸರ್ಕಾರ ಸಾಮಾಜಿಕ ಜಾಲತಾಣದ ಮೇಲೆ ನಿಷೇಧ ಹೇರಿತು. ಇದನ್ನೇ ನೆಪ ಮಾಡಿಕೊಂಡು, ರೊಚ್ಚಿಗೆದ್ದ ಅಲ್ಲಿನ ಜೆನ್ ಝೀ ಯುವಪಡೆ (1997 ರಿಂದ 2010 ರವರೆಗೆ ಜನಿಸಿದ ಮಕ್ಕಳು) ನೇಪಾಳ ಸರ್ಕಾರದ ವಿರುದ್ಧ ತಮ್ಮೊಳಗಿದ್ದ ಆಕ್ರೋಶಗಳೆಲ್ಲವನ್ನೂ ಹೊರಹಾಕಿ ಒಮ್ಮೆಲೇ ಕ್ಷಿಪ್ರ ಕ್ರಾಂತಿಗೆ ಕಾರಣರಾದರು. ಪರಿಣಾಮವಾಗಿ ಅಲ್ಲಿನ ಸರ್ಕಾರ ಮತ್ತು ಸಚಿವರು ಪ್ರಾಣವುಳಿಸಿಕೊಳ್ಳಲು ವಿದೇಶಕ್ಕೆ ಪಲಾಯನ ಮಾಡಿದರು. ಯುವಪಡೆ ಸಂಪೂರ್ಣವಾಗಿ ಅಲ್ಲಿನ ಸರ್ಕಾರವನ್ನು ಕೆಡವಿ, ಜಯಭೇರಿ ಬಾರಿಸಿದರು.

ಹಿಂಸಾತ್ಮಕ ಸ್ವರೂಪವನ್ನು ಪಡೆದ ಈ ಜೆನ್ ಝೀ ಅಭಿಯಾನ ಬೂದಿ ಮುಚ್ಚಿದ ಕೆಂಡದಂತಿದೆ. ಅಲ್ಲಿನ ಸ್ಥಿತಿಗತಿ ಊಹಿಸಲಸಾಧ್ಯ. ಅಲ್ಲಿ ಜೈಲಿನಲ್ಲಿದ್ದ ಖೈದಿಗಳು ಸಾಮೂಹಿಕವಾಗಿ ಹೊರಗಡೆ ಬಂದಿರುವುದು ಮಾತ್ರವಲ್ಲದೆ, ಭಾರತದ ಗಡಿ ಭಾಗಗಳಲ್ಲಿ ನುಸುಳುವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಈ ಮೂಲಕ ಭಾರತದ ಸುತ್ತಮುತ್ತಲಿನ ಐದನೇ ರಾಷ್ಟ್ರವಾಗಿ ನೇಪಾಳ ರಾಜಕೀಯ ಅರಾಜಕತೆಗೆ ಸಾಕ್ಷಿಯಾಗಿದೆ. ಈ ನಡುವೆ ಸೋಷಿಯಲ್ ಮೀಡಿಯಾದಲ್ಲಿ ನೇಪಾಳದ ಬಗ್ಗೆ ಹಲವು ಗಂಭೀರ ಚರ್ಚೆಗಳು ನಡೆದಿವೆ.

ಚೀನಾಕ್ಕೆ ಹತ್ತಿರವಾಗಿದ್ದ ನೇಪಾಳದ ಪ್ರಧಾನಿ ಒಲಿ ಅಧಿಕಾರವನ್ನು ಕಳೆದುಕೊಂಡು ಪಲಾಯನಗೈದಿದ್ದಾರೆ. ಜೆನ್ ಝೀ ಕ್ರಾಂತಿ ಮಹತ್ತರವಾದುದು ಎಂದು ಮಾಧ್ಯಮಗಳು ಅಬ್ಬರಿಸುತ್ತಿವೆ. ನೇಪಾಳ ಸರ್ಕಾರ ಏಕಾಏಕಿ ಸೋಶಿಯಲ್ ಮೀಡಿಯಾ ಬ್ಯಾನ್ ಮಾಡಿದ್ದು ಈ ತ್ವರಿತ ಕ್ರಾಂತಿಗೆ ನಾಂದಿ ಹಾಡಿತು. ನೇಪಾಳದ ಯುವಪಡೆ ತಮ್ಮ ವಾಕ್ ಸ್ವಾತಂತ್ರ್ಯ ಮರಳಿ ಪಡೆಯಲು ರೊಚ್ಚಿಗೆದ್ದರು. ನಿರುದ್ಯೋಗದಿಂದ ಹತಾಶಗೊಂಡಿದ್ದ, ಭ್ರಷ್ಟಾಚಾರದಿಂದ ಬೇಸತ್ತಿದ್ದ ಯುವಜನತೆಗೆ ಸೋಶಿಯಲ್ ಮೀಡಿಯಾ ನಿಷೇಧ ಒಂದು ಕಿಚ್ಚಿನಂತೆ ವರ್ತಿಸಿತು. ನೇಪಾಳ ಸರ್ಕಾರವನ್ನು ಆಹುತಿ ತೆಗೆದುಕೊಂಡ ಭುಗಿಲೆದ್ದ ಜ್ವಾಲೆಗೆ ಈ ಕಿಚ್ಚು ಕಾರಣವಾಯಿತು ಹೇಸಿಗೆ ತರಿಸುವಂತಹ ಉಳ್ಳವರ ಆಡಂಬರ, ಅಧಿಕಾರಿಗಳ ಭ್ರಷ್ಟಾಚಾರ, ಬಡತನ, ವ್ಯಾಪಕ ನಿರುದ್ಯೋಗ ನೇಪಾಳದಲ್ಲಿ ಉದ್ಭವವಾಗಿರುವ ಕಳವಳಕಾರಿ ಬೆಳವಣಿಗೆಗೆ ಕಾರಣ ಎಂದು ನಾವು ನೀವು ನಂಬಿದ್ದರೆ, ಅದರಲ್ಲಿ ಯಾವ ತಪ್ಪಿಲ್ಲ. ಆದರೆ ಜಾಗತಿಕ ರಾಜ-ಕೀಯವನ್ನು ಗಮನಿಸುತ್ತಿರುವವರಿಗೆ ಈ ಘಟನಾವಳಿಗಳು ಬೇರೆಯದೇ ಕತೆಯನ್ನು ಸೂಚಿಸುತ್ತಿವೆ ಎನಿಸುವುದಲ್ಲವೇ?

ಸೋಶಿಯಲ್ ಮೀಡಿಯಾ ಪ್ರಪಂಚದಲ್ಲಿ ಬಹಳಷ್ಟು ಕ್ರಾಂತಿಗಳಿಗೆ ಉತ್ತೇಜನ ನೀಡಿದೆ. ಅರೇಬಿಯನ್ ಸ್ಪ್ರಿಂಗ್, ಜಾಸ್ಮಿನ್ ಕ್ರಾಂತಿ, ಬಾಂಗ್ಲಾದೇಶದ ಕ್ಷಿಪ್ರ ಕ್ರಾಂತಿಯ ಹಿಂದೆ ಸೋಶಿಯಲ್ ಮೀಡಿಯಾ ಸಕ್ರಿಯವಾಗಿದ್ದು ಎದ್ದು ಕಾಣುತ್ತದೆ. ಅದರೆ ಈ ಎಲ್ಲಾ ಕ್ರಾಂತಿಗಳು ಅಮೆರಿಕಾ ಕೈಗೊಂಬೆ ಆಡಳಿತವನ್ನು ಸ್ಥಾಪಿಸಲು ಬಳಸಿಕೊಳ್ಳಲಾಯಿತು ಎಂಬುದು ಗಮನಿಸಬೇಕಾದ ವಿಷಯ. ಈಜಿಪ್ಟ್, ಲಿಬಿಯಾ, ಟ್ಯೂನಿಶಿಯಾ, ಇರಾಕ್ ನಲ್ಲಿ ಯಶಸ್ವಿಯಾದ ಅಮೆರಿಕಾ ಇತ್ತೀಚಿಗೆ ಬಾಂಗ್ಲಾದೇಶ, ಪಾಕಿಸ್ತಾನ ಮತ್ತೀಗ ನೇಪಾಳ. ಒಮ್ಮೆ ಯೋಚಿಸಿ ಭಾರತ, ಚೀನಾ, ರಷ್ಯಾವನ್ನು ತನ್ನ ಕಾರ್ಯತಂತ್ರದಿಂದ ಹೆಣೆದು ನಿಯಂತ್ರಿಸಲು ಅಮೆರಿಕಾಕ್ಕೆ ಬಾಂಗ್ಲಾ, ಪಾಕಿಸ್ತಾನ ಮತ್ತು ನೇಪಾಳ ಅತ್ಯಾವಶ್ಯಕ ಎನಿಸುತ್ತಿದೆಯೇ? ಹಾಗಾಗಿ ಈ ಎಲ್ಲಾ ದಂಗೆಗಳ ಹಿಂದೆ ದೊಡ್ಡಣ್ಣನ ಕೈವಾಡ ಇರುವುದು ಖಚಿತವಲ್ಲವೇ?

ನೇಪಾಳದಲ್ಲಿ ನಡೆದ ಉಜಟಿ ಚ ಕ್ಷಿಪ್ರ ಕ್ರಾಂತಿ ನಮಗೆಲ್ಲ ಅಂದರೆ ಭಾರತೀಯರಿಗೆ ಎಚ್ಚ-ರಿಕೆಯ ಗಂಟೆ. ನೇಪಾಳದಲ್ಲಿ ಮೊನ್ನೆ ಬೆಂಕಿ ಹಚ್ಚಿದ್ದ ಯುವಪಡೆ ಇಂದು ಪೊರಕೆ ಹಿಡಿದು ಸ್ವಚ್ಚತಾ ಅಭಿಯಾನವನ್ನು ಮಾಡುತ್ತಿದೆ. ಸರ್ಕಾರವನ್ನು ಉರುಳಿಸುವಾಗ ಇದ್ದ ಒಕ್ಕಟ್ಟು, ಇಂದು ಅದೇ ಯುವಪಡೆಯಲ್ಲಿ ಬಿಕ್ಕಟ್ಟು ಉಂಟಾಗಿದೆ. ಒಟ್ಟಿನಲ್ಲಿ ಇದೊಂದು ರೀತಿಯ ಇಕ್ಕಟ್ಟಿನ ಪರಿಸ್ಥಿತಿಯಾಗಿದೆ. ಯಾರದೋ ಹೆಗಲು, ಮತ್ಯಾರದೋ ಬಂದೂಕು, ಇನ್ಯಾರೋ ಟ್ರಿಗ್ಗರ್ ಒತ್ತುತ್ತಿದ್ದಾರೆ ಎಂದನಿಸುವುದಿಲ್ಲವೇ? ಒಮ್ಮೆ ಯೋಚಿಸಿ ನೋಡಿ.. ಇದು ನಮಗೆಲ್ಲ ಕರೆಗಂಟೆಯಲ್ಲವೇ? ನೇರವಾಗಿ ಭಾರತವನ್ನು ಕೆಣಕಿದರೆ, ನಷ್ಟ ಕಟ್ಟಿಟ್ಟ ಬುತ್ತಿ. ಹಾಗಾಗಿ ಅಕ್ಕಪಕ್ಕದ, ಸುತ್ತಮುತ್ತಲಿನವರನ್ನು ಬಳಸಿಕೊಂಡು ತನ್ನ ದೊಡ್ಡಸ್ತನವನ್ನು ಉಳಿಸಿಕೊಳ್ಳುವ ಪ್ರಯತ್ನ ವಿದೇಶಿಗರದ್ದಾಗಿದೆ ಎನಿಸುತ್ತಿದೆ. ಭಾರತ ಅಭಿವೃದ್ಧಿ ಪಥದಲ್ಲಿ ವಿಶ್ವದಲ್ಲಿ ನಾಲ್ಕನೇ ಸ್ಥಾನವನ್ನು ಹೊಂದಿದೆ. ವಿಶ್ವಾದ್ಯಂತ ಭಾರತೀಯ ಉದ್ಯಮಿಗಳು, ತಂತ್ರಜ್ಞರು, ವಿಜ್ಞಾನಿಗಳು ಅಮೋಘ ಯಶಸ್ಸನ್ನು ಸಾಧಿಸುತ್ತಿದ್ದಾರೆ. ಹಾಗೆಯೇ ನಮ್ಮ ರಕ್ಷಣಾಪಡೆ ಕೂಡ ಸಕ್ರಿಯವಾಗಿದ್ದು, ಎಂತಹ ಸಂದರ್ಭದಲ್ಲೂ ಶತ್ರುಗಳ ಹೆಡೆಮುರಿಯನ್ನು ಕಟ್ಟಲು ಸಿದ್ಧರಿದ್ದಾರೆ. ಅರ್ಥಾತ್ ಭಾರತ ಈಗ ಹಿಂದಿನಂತಿಲ್ಲ. ಎಲ್ಲದಕ್ಕೂ ಸಿದ್ಧವಾಗಿ ವಿಶ್ವಗುರುವಾಗುವತ್ತ ಹೆಜ್ಜೆ ಹಾಕುತ್ತಿದೆ. ಇದು ಕೆಲವರಿಗೆ ನುಂಗಲಾರದ ತುತ್ತಾಗಿದೆ. ಏನೇಯಾಗಲಿ ನಮ್ಮತನವನ್ನು, ನಮ್ಮ ದೇಶಭಕ್ತಿ ಮತ್ತು ಒಗ್ಗಟ್ಟನ್ನು ವಿದೇಶಿಯರಿಗೆ ಮಾರಿಕೊಳ್ಳದೇ ಎಚ್ಚರಿಕೆಯಿಂದ ಇರೋಣ.

ನಮ್ಮ ದೇಶ ನಮ್ಮ ಹೆಮ್ಮೆ.
ಜೈ ಹಿಂದ್
***



**ಲತಾ ಕೆ.ಎಸ್.ಹೆಗಡೆ**
**ಬೆಂಗಳೂರು**

# ಗುರುಶ್ರೀ ರಾಜ್ಯ ಪ್ರಶಸ್ತಿ-ಡಾ. ಮಮತ ಸಾಧನೆಗೆ ಮತ್ತೊಂದು ಗರಿ



**ಬೆಂಗಳೂರು:**ಶಿಕ್ಷಕರ ದಿನಾಚರಣೆಯ ಅಂಗವಾಗಿ ವಿವೇಕ ಚೇತನ ಚಾರಿಟಬಲ್ ಟ್ರಸ್ಟ್ (ರಿ) ಹಾಗೂ ಶ್ರೀ ರಾಘವೇಂದ್ರ ಪ್ರಕಾಶನ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ಶಿಕ್ಷಣ ತಜ್ಞೆ, ಸಂಪನ್ಮೂಲ ವ್ಯಕ್ತಿ, ಕವಯತ್ರಿ ಮತ್ತು ಲೇಖಕಿ ಡಾ. ಮಮತ ಹೆಚ್.ಎ. ಅವರಿಗೆ "ಗುರುಶ್ರೀ ರಾಜ್ಯ ಪ್ರಶಸ್ತಿ" ನೀಡಿ ಗೌರವಿಸಲಾಯಿತು.

ಡಾ. ಮಮತ ಅವರು ಎಂ.ಎ., ಎಂ.ಎಡ್ ಪದವೀಧರರಾಗಿದ್ದು, ಸ್ಟೇಟ್, ಐಸಿಎಸ್‌ಇ, ಸಿಬಿಎಸ್‌ಇ ಹಾಗೂ ಐಬಿ ಪಠ್ಯಕ್ರಮಗಳಲ್ಲಿ ಪರಿಣತಿ ಪಡೆದಿದ್ದಾರೆ. ಕರ್ನಾಟಕದಲ್ಲೇ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಶಾಲೆಗಳಿಗೆ ಪಠ್ಯಕ್ರಮವನ್ನು ರಚಿಸಿ, ಅದಕ್ಕೆ ಸೂಕ್ತ ಪಠ್ಯಪುಸ್ತಕಗಳನ್ನು ತಯಾ-ರಿಸಿದ ಸಾಧನೆ ಇವರದಾಗಿದೆ. ಪ್ರಸ್ತುತ ಅವರು One World International Schoolನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದು, 17 ವರ್ಷಗಳ ಬೋಧನಾ ಅನುಭವವನ್ನು ಹೊಂದಿದ್ದಾರೆ.

ಸಿ.ಬಿ.ಎಸ್.ಇ ಬೋರ್ಡ್ ಇವರನ್ನು ಸಂಪನ್ಮೂಲ ವ್ಯಕ್ತಿಯಾಗಿ ಆಯ್ಕೆ ಮಾಡಿದ್ದು, ಇತರ ಶಾಲೆಗಳಲ್ಲಿಯೂ ಮಾತೃಭಾಷೆ ಕನ್ನಡ, ಧ್ಯಾನ, ಮೈಂಡ್ ಪವರ್ ಕುರಿತಾದ ತರಬೇತಿ ಹಾಗೂ ಉಪನ್ಯಾಸಗಳನ್ನು ನೀಡುತ್ತಿದ್ದಾರೆ. ಅನೇಕ ಶಿಕ್ಷಣ ಸಂಬಂಧಿ ಪುಸ್ತಕಗಳನ್ನು ರಚಿಸಿ ಪ್ರಕಟಿಸಿರುವ ಅವರು, ಶಾಲಾ ಹಾಗೂ ಸಾಹಿತ್ಯ ಕಾರ್ಯಕ್ರಮಗಳಲ್ಲಿ ಅತಿಥಿ, ಸಂಪನ್ಮೂಲ ವ್ಯಕ್ತಿ, ಆಪ್ತಸಮಾಲೋಚಕ, ಲೇಖಕಿ, ಕಥೆಗಾರ್ತಿ, ಕವಯತ್ರಿ, ಗಜಲ್ಗಾರ್ತಿ ಮುಂತಾದ ವಿಭಿನ್ನ ಹಣೆಪಟ್ಟಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಇಂಗ್ಲಿಷ್ ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸುವುದರೊಂದಿಗೆ, ಡಾಕ್ಯುಮೆಂಟರಿ ಹಾಗೂ ಪ್ರೂಫ್ ಕರಕ್ಷನ್ಗಳಲ್ಲಿ ಸಹ ಸೇವೆ ಸಲ್ಲಿಸಿದ್ದಾರೆ. ಕಳೆದ ವರ್ಷ ವಿಶ್ವವಿಖ್ಯಾತ ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸಿದ ಕೀರ್ತಿ ಇವರದಾಗಿದೆ. ಹಲವಾರು ಸಾಹಿತ್ಯ ಸಮಾರಂಭಗಳಲ್ಲಿ ತೀರ್ಪುಗಾರರಾಗಿ ಸೇವೆ ಸಲ್ಲಿಸಿರುವ ಇವರ ಬರಹಗಳು ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳಲ್ಲಿ ನಿಯಮಿತವಾಗಿ ಪ್ರಕಟಗೊಂಡಿವೆ.

ಸಾಮಾಜಿಕ ಸೇವೆಯ ಕ್ಷೇತ್ರದಲ್ಲಿಯೂ ಅವರು ಮಾದರಿಯಾಗಿದ್ದು, ಮಹಿಳೆಯರಿಗೆ ಬ್ಯೂಟೀಷಿಯನ್, ಹೊಲಿಗೆ, ಫ್ಯಾಷನ್ ಡಿಸೈನಿಂಗ್, ಕರಕುಶಲತೆ, ಮೆಹಂದಿ, ಕಸೂತಿ ಮುಂತಾದ ವೃತ್ತಿಪರ ತರಗತಿಗಳನ್ನು ನೀಡಿ ಸ್ವಾವಲಂಬಿಗಳಾಗಲು ನೆರವಾಗಿದ್ದಾರೆ. ಬುದ್ಧಿಮಾಂದ್ಯ ಮಕ್ಕಳಿಗೆ ಅವರ ಸಾಮರ್ಥ್ಯಕ್ಕೆ ತಕ್ಕ ಆರ್ಟ್ & ಕ್ರಾಫ್ಟ್ ತರಬೇತಿ ನೀಡಿ, ಸುಮಾರು ಎರಡು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಮಹಿಳಾ ಸಬಲೀಕರಣ, ಪ್ರಕೃತಿ ಸಂರಕ್ಷಣೆ, ತೃತೀಯ ಲಿಂಗಿಗಳ ಹಕ್ಕುಗಳು, ವಿದ್ಯಾರ್ಥಿಗಳಲ್ಲಿ ಕನ್ನಡ ಭಾಷಾಭಿಮಾನ ಬೆಳೆಸುವ ಶಿಕ್ಷಕರ ಪಾತ್ರ, ದೇಶಪ್ರೇಮ ಹಾಗೂ ಭಕ್ತಿ ಮೂಡಿಸುವ ಕುರಿತು ಸಂಶೋಧನಾ ಲೇಖನಗಳನ್ನು ಮಾಡಿದ್ದಾರೆ. ಅಲ್ಲದೆ, ಬೆಂಗಳೂರು ಮೆಟ್ರೋದಲ್ಲಿ ಶಿಸ್ತಿನ ನಡೆ?ನುಡಿಗಳ ಕುರಿತು ಜಾಹೀರಾತುಗಳ ಮೂಲಕ ಜನಜಾಗೃತಿ ಮೂಡಿಸಿದ್ದಾರೆ.

ಇವರ ಸಾಹಿತ್ಯ ಕೃತಿಗಳು, ಅಧ್ಯಯನಗಳು ಹಾಗೂ ಸಾಮಾಜಿಕ ಸೇವೆಯನ್ನು ಮೆಚ್ಚಿಕೊಂಡು ಅನೇಕ ಸಂಘ?ಸಂಸ್ಥೆಗಳು ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ, ಪುರಸ್ಕಾರ ಹಾಗೂ ಗೌರವಗಳನ್ನು ನೀಡಿ ಸನ್ಮಾನಿಸಿವೆ. ಸಾಹಿತ್ಯ ಕ್ಷೇತ್ರದಲ್ಲಿ ಇವರ ಹೆಸರು Karnataka Book of Records ಮತ್ತು World Book of Recordsನಲ್ಲಿ ಸಹ ದಾಖಲಾಗಿದೆ.

ಈ ಎಲ್ಲ ಸಾಧನೆಗಳನ್ನು ಪರಿಗಣಿಸಿ, ರಾಘವೇಂದ್ರ ಪ್ರಕಾಶನ ಹಾಗೂ ವಿವೇಕ ಚೇತನ ಟ್ರಸ್ಟ್ ಅಧ್ಯಕ್ಷರು ಪ್ರಶಸ್ತಿ ಪ್ರದಾನ ಮಾಡಿ, ಡಾ. ಮಮತ ಅವರ ಸಾಧನೆಗಳನ್ನು ಶ್ಲಾಘಿಸಿದರು.

ಅವರು ಶಿಕ್ಷಣ ಕ್ಷೇತ್ರದ ಜೊತೆಗೆ ಕಾವ್ಯ, ಲೇಖನ ಹಾಗೂ ಸಾಂಸ್ಕೃತಿಕ ಸೇವೆಯಲ್ಲಿ ನೀಡುತ್ತಿರುವ ಕೊಡುಗೆಗಳನ್ನು ಉನ್ನತವಾಗಿ ಪ್ರಸ್ತಾಪಿಸಿ, ಭವಿಷ್ಯದಲ್ಲಿ ಇನ್ನಷ್ಟು ದೊಡ್ಡ ಮಟ್ಟದ ಸಾಧನೆಗಳನ್ನು ಮಾಡುವಂತೆ ಹಾರೈಸಿದರು.

**– ರಾಘವೇಂದ್ರ (ಶಿಕ್ಷಕರ ಸಂಪನ್ಮೂಲ ವ್ಯಕ್ತಿ)**

# ದಸರಾ ಉತ್ಸವದ ಪೂರ್ವಭಾವಿ ಸಭೆ

**ತೇರದಾಳ :** ಇದೇ ಸಪ್ಟೆಂಬರ ತಿಂಗಳಲ್ಲಿ ನಡೆಯಲಿರುವ ನಾಡ ಹಬ್ಬ ದಸರಾ ಉತ್ಸವದ ನಿಮಿತ್ಯವಾಗಿ ಇಲ್ಲಿನ ಕಲ್ಲಟ್ಟಿ ಓಣಿ ಆದಿಶಕ್ತಿ ತರುಣ ಮಂಡಳಿಯವರು ಹನುಮಾನ ದೇವಸ್ಥಾನದ ಆವರಣದಲ್ಲಿ ಪೂರ್ವಭಾವಿ ಸಭೆ ನಡೆಸಿದರು.

ಈ ವರ್ಷದ ಉತ್ಸವ ಇಪ್ಪತ್ತೇಳನೇ ವರ್ಷದ್ದಾಗಿದೆ. ಪ್ರತಿ ವರ್ಷದಂತೆ ಈ ವರ್ಷವೂ ಒಂಭತ್ತು ದಿನಗಳ ಕಾಲ ಆದಿಶಕ್ತಿ ದೇವಿ ಮೂರ್ತಿ ಪ್ರತಿಷ್ಠಾಪನೆ, ಒಂಭತ್ತು ದಿನಗಳವರೆಗೆ ವಿವಿಧ ಸ್ಪರ್ಧೆ,

ಮುತ್ತೈದೆಯರಿಗೆ ಉಡಿ ತುಂಬುವುದು, ಅನ್ನ ಪ್ರಸಾದ ವ್ಯವಸ್ಥೆ ಸೇರಿದಂತೆ ದಸರಾ ಉತ್ಸವವನ್ನು ಸಡಗರ ಸಂಭ್ರಮದಿಂದ ಆಚರಿಸಲು ನಿರ್ಧರಿಸಲಾಯಿತು.

ಇಪ್ಪತ್ತೇಳನೇ ವರ್ಷದ ದಸರಾ ಉತ್ಸವ ಸಮಿತಿ ಅಧ್ಯಕ್ಷರಾಗಿ ರಾಯಪ್ಪ ಅಥಣಿ,

ಉಪಾಧ್ಯಕ್ಷರಾಗಿ ಸಂಗಮೇಶ ಸಣಪೇಟೆ, ಕಾರ್ಯದರ್ಶಿಯಾಗಿ ತಮ್ಮಣ್ಣಿ ನಾಗರೆಡ್ಡಿ, ಖಜಾಂಚಿಯಾಗಿ ಸಂಗಮೇಶ ನೀವರಗಿ ಅವರನ್ನು ಆಯ್ಕೆ ಮಾಡಲಾಯಿತು. ಬಸವರಾಜ ಮುದಕನ್ನವರ, ರಾಜು ಹೊಸಮನಿ,

ಅಲ್ಲಪ್ಪ ಇಂಗಳಗಿ, ದಾನಪ್ಪ ಕರೋಲಿ, ನಾಗಪ್ಪ ಹೊಸಮನಿ, ಸಂಜು ಖವಾಸಿ, ಈರಪ್ಪ ತಾರದಾಳ ಇನ್ನಿತರರು ಉಪಸ್ಥಿತರಿದ್ದರು.

# ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಶಿಕ್ಷಕರ ಪರಿಶ್ರಮ ಅಗತ್ಯ




**ಯಲಬುರ್ಗಾ :** 'ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುವುದರ ಜತೆ ಪ್ರಜ್ಞಾವಂತ ನಾಗರಿಕರನ್ನಾಗಿ ಮಾಡುವಲ್ಲಿ ಶಿಕ್ಷರ ಜವಾಬ್ದಾರಿ ಅತ್ಯಂತ ಮಹತ್ವದ್ದಾಗಿದೆ' ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಸೋಮಶೇಖರಗೌಡ ಪಾಟೀಲ ಹೇಳಿದರು.

ಪಟ್ಟಣದಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್ ಅವರ 137ನೇ ವರ್ಷದ ಜನ್ಮದಿನದ ಪ್ರಯುಕ್ತ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, 'ಹಿಂದೆ ಇದ್ದ ಗುರುಕುಲ ಪದ್ಧತಿಯಲ್ಲಿ ಗುರುಗಳು ಶಿಷ್ಯರನ್ನು ತಮ್ಮೊಂದಿಗೆ ಇಟ್ಟುಕೊಂಡು ಅಭ್ಯಾಸ ಮಾಡಿಸುತ್ತಿದ್ದರು. ಆದರೆ ಈಗ ಅಂತಹ ಅಗತ್ಯವಿಲ್ಲ, ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಶಿಕ್ಷಣದ ಮೂಲ ಆಶಯ ಈಡೇರುವ ರೀತಿಯಲ್ಲಿ ಪರಿಣಾಮಕಾರಿ ಬೋಧನೆಗೆ ಮುಂದಾಗುವುದು ಹಾಗೂ ಶಿಕ್ಷಣವನ್ನು ಸರಿಯಾಗಿ ಸದ್ಬಳಕೆ ಮಾಡಿಕೊಳ್ಳುವ ಮನೋಭಾವ ವಿದ್ಯಾರ್ಥಿಗಳಲ್ಲಿ ಮತ್ತು ಪಾಲಕರಲ್ಲಿಯೂ ಅವಶ್ಯಕವಾಗಿ ಮೂಡಬೇಕಾಗಿದೆ' ಎಂದರು.

ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಗೌಡ್ರ ಮಾತನಾಡಿ, 'ತಾಲ್ಲೂಕಿನಲ್ಲಿ ಶಿಕ್ಷಣ ಕ್ಷೇತ್ರ ನಿರೀಕ್ಷೆಗೂ ಮೀರಿ ಪ್ರಗತಿಯಲ್ಲಿದೆ. ಕ್ಷೇತ್ರದ ಶಾಸಕ ಬಸವರಾಜ ರಾಯರಡ್ಡಿ ಅವರು ಅಗತ್ಯ ಸೌಲಭ್ಯ ಮತ್ತು ಹೆಚ್ಚೆಚ್ಚು ಶಿಕ್ಷಣ ಸಂಸ್ಥೆಗಳು ಕ್ಷೇತ್ರದಲ್ಲಿ ತೆರೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಇಲ್ಲಿಯ ಮಕ್ಕಳು ಶೈಕ್ಷಣಿಕ ಸಾಧನೆಗೆ ಸಾಕಷ್ಟು ಅವಕಾಶಗಳಿವೆ' ಎಂದರು.

ರಾಧಾಕೃಷ್ಣನ್ ಅವರ ಭಾವಚಿತ್ರದ ಮೆರವಣಿಗೆ ಅದ್ದೂರಿಯಾಗಿ ನಡೆಯಿತು. ತಾಲ್ಲೂಕಿನ ವಿವಿಧ ಗ್ರಾಮದ ಶಿಕ್ಷಕರು ಪಾಲ್ಗೊಂಡಿದ್ದರು.

ನಿವೃತ್ತಿ ಹೊಂದಿದ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಪಟ್ಟಣ ಪಂಚಾಯಿತಿ ಅಧ್ಯಕ್ಷ ಅಂದಯ್ಯ ಕಳ್ಳಿಮಠ, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಸುಧೀರ ಕೊರ್ಲಳ್ಳಿ, ಕೆಎಂಎಫ್ ನಿರ್ದೇಶಕ ಹಂಪಯ್ಯ ಹಿರೇಮಠ, ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಮಾಸ್ತಿ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಎಸ್.ವಿ.ಧರಣಾ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಸಿದ್ದಲಿಂಗಪ್ಪ ಶ್ಯಾಗೋಟಿ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಟಿ.ಜೆ.ದಾಣಿ, ಎಫ್.ಎಂ.ಕಳ್ಳಿ. ಎಸ್.ವಿ. ಬೆಣಕಲ್. ಸಂಗಮೇಶ ತೋಟದ, ಹುಸೇನ್‌ಸಾಬ ಭಾಗವಾನ್ ದೊಡ್ಡನಗೌಡ ಪಾಟೀಲ್, ದೈಹಿಕ ಶಿಕ್ಷಣಾಧಿಕಾರಿ ವೀರಭದ್ರಪ್ಪ ಅಂಗಡಿ ಸೇರಿ ಅನೇಕರು ಇದ್ದರು.

# ನೌಕರರ ಬಲ ಸಂಘಟನೆಗೂ ಶಕ್ತಿ: ಕೆಪಿಟಿಸಿಎಲ್, ಎಸ್ಕಾಂ ನೌಕರರ ರಾಜ್ಯಮಟ್ಟದ ಸಮಾವೇಶ



**ಕೊಪ್ಪಳ :** 'ಕೆಪಿಟಿಸಿಎಲ್ ಮತ್ತು ವಿವಿಧ ಎಸ್ಕಾಂಗಳ ವೀರಶೈವ ಲಿಂಗಾಯತರ ವೇದಿಕೆ ಸಂಘಟನೆಯು ಸಾಕಷ್ಟು ನೌಕರರ ಬಲದಿಂದಾಗಿ ಬಲಿಷ್ಠವಾಗಿದೆ' ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಮತ್ತು ಎಸ್ಕಾಂಗಳ ವೀರಶೈವ ಲಿಂಗಾಯತರ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಬಿ.ರು.ಪ್ರಕಾಶ ಹೇಳಿದರು.

ಲಿಂಗಾಯತರಿಗೆ ಸೂಕ್ತ ಪ್ರಾತಿನಿಧ್ಯ ದೊರೆಯುತ್ತಿರಲಿಲ್ಲ ಎಂಬ ಕಾರಣಕ್ಕಾಗಿ ಈ ವೇದಿಕೆಯು ಅಸ್ತಿತ್ವಕ್ಕೆ ಬಂದಿದೆ ಎಂದು ಭಾನುವಾರ ವೇದಿಕೆಯ 3ನೇ ರಾಜ್ಯಮಟ್ಟದ ಸಮಾವೇಶದಲ್ಲಿ ಅವರು ಹೇಳಿದರು.

ಕೇವಲ ವ್ಯಾಟ್ಸ್‌ಆಯಪ್ ಗ್ರೂಪ್ ಆಗಿದ್ದ ವೇದಿಕೆಯು ಅನೇಕ ಮುಖಂಡರ ಶ್ರಮದಿಂದಾಗಿ ಈಗ ಸಂಘಟನೆಯ ರೂಪವನ್ನು ಪಡೆದುಕೊಂಡಿದೆ' ಎಂದು ಅಭಿಪ್ರಾಯಪಟ್ಟರು.

ಹೂವಿನಹಡಗಲಿಯ ಗವಿಸಿದ್ಧೇಶ್ವರ ಶಾಖಾಮಠದ ಹಿರಿಶಾಂತವೀರ ಸ್ವಾಮೀಜಿ ಅವರು ಮಾತನಾಡಿದರು. ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ವೇದಿಕೆಯ ಸದಸ್ಯರು ಪಾಲ್ಗೊಂಡಿದ್ದರು.

# ಕನಕಗಿರಿಯಲ್ಲಿ ಉಪನೊಂದಣಿ ಕಚೇರಿ ಶೀಘ್ರ ಆರಂಭ : ಸಚಿವ ಶಿವರಾಜ ತಂಗಡಗಿ ಭೇಟಿ



**ಕನಕಗಿರಿ :** 'ಉಪನೋಂದಣಿ ಕಚೇರಿ ತೆರೆಯಲು ಅಡ್ಡಿಯಾಗಿದ್ದ ತಾಂತ್ರಿಕ ತೊಂದರೆ ನಿವಾರಣೆಯಾಗಿದ್ದು ಶೀಘ್ರದಲ್ಲಿ ಆರಂಭಿಸಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ತಿಳಿಸಿದರು.

ತಾಲ್ಲೂಕಿನ ಗೌರಿಪುರ ಗ್ರಾಮದ ಕೆರೆಯನ್ನು ಭಾನುವಾರ ವೀಕ್ಷಿಸಿ ಅವರು ಮಾತನಾಡಿದರು.

ಕೃಷ್ಣಾ ಬಿ ಸ್ಕೀಂ ಹಾಗೂ ತುಂಗಾಭದ್ರ ಜಲಾಶಯದಿಂದ ತಾಲ್ಲೂಕಿನ ಲಾಯದುಣಸಿ, ಗೌರಿಪುರ, ಹುಲಸನಹಟ್ಟಿ, ಲಕ್ಷ್ಮೀ ದೇವಿ ಕೆರೆ,

ಕಾಟಾಪುರ, ಇಂಗಳದಾಳ ಇತರೆ ಗ್ರಾಮದ ಕೆರೆಗಳಿಗೆ ನೀರು ಹರಿದು ಬರುತ್ತಿದ್ದು ಲಾಯದುಣಸಿ ಹೊರತುಪಡಿಸಿ ಉಳಿದ ಕೆರೆಗಳು ಭರ್ತಿಯಾಗುವ ಹಂತದಲ್ಲಿವೆ ಡಿಸೆಂಬರ್‌ನಲ್ಲಿ ಕೆರೆಗಳಿಗೆ ಬಾಗಿನ ಅರ್ಪಿಸಲಾಗುವುದು ಎಂದು ತಿಳಿಸಿದರು.

ಪದೆಪದೇ ಪೈಪ್‌ಗಳು ಒಡೆಯುತ್ತಿರುವ ಹಿನ್ನೆಲೆಯಲ್ಲಿ ಲಾಯದುಣಸಿ ಗ್ರಾಮದ ಕೆರೆಗೆ ನೀರು ಬರುತ್ತಿಲ್ಲ,

ಅದನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

ಕೆಕೆಆರ್‌ಡಿಬಿಯಿಂದ 150 ಕೋಟಿ, ಯೋಜನಾ ಇಲಾಖೆಯಿಂದ 60 ಕೋಟಿ, ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ ?50 ಕೋಟಿ ಮಂಜೂರಾಗಿದ್ದು ಅಭಿವೃದ್ಧಿ ಕಾಮಗಾರಿಗಳನ್ನುಕೈಗೆತ್ತಿಕೊಳ್ಳಲಾಗುವುದು. ಸಮುದಾಯ ಭವನ, ದೇವಸ್ಥಾನ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣಕ್ಕೆ 7ಕೋಟಿ ರೂಪಾಯಿ ನೀಡಲಾಗಿದೆ ಎಂದರು.

ಪಟ್ಟಣದ ಎಪಿಎಂಸಿಯ ಶ್ರಮಿಕರ ಭವನದಲ್ಲಿ ನ್ಯಾಯಾಲಯ ತೆರೆದು ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಮೂಲಸೌಲಭ್ಯ ಕಲ್ಪಿಸಲಾಗುವುದು ಎಂದು ಹೇಳಿದರು.

ಸಂಸದ ರಾಜಶೇಖರ ಹಿಟ್ನಾಳ ಮಾತನಾಡಿ ಪಟ್ಟಣದಲ್ಲಿ ಉಪ ಅಂಚೆ ಕಚೇರಿ ಕಟ್ಟಡ ಕಾಮಗಾರಿಗೆ ?50 ಲಕ್ಷ ಬಿಡುಗಡೆಯಾಗಿದ್ದು ಕಟ್ಟಡ ನಿರ್ಮಾಣಕ್ಕೆ ನಿವೇಶನ ಗುರುತಿಸಲಾಗಿದೆ ಎಂದರು.

ಇದಕ್ಕೂ ಮುನ್ನ ಸಚಿವರು ಗೌರಿಪುರ ಗ್ರಾಮದಲ್ಲಿ ನೂತನ ರಾಜೀವಗಾಂಧಿ ಸೇವಾ ಕೇಂದ್ರ, ಅಂಗನವಾಡಿ ಕೇಂದ್ರದ ಕಟ್ಟಡವನ್ನು

ಉದ್ಘಾಟಿಸಿದರು. ಇದೇ ಸಮಯದಲ್ಲಿ ಸೋಮಸಾಗರ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ ಗ್ರಾಮಸ್ಥರಿಂದ ಸನ್ಮಾನ ಸ್ವೀಕರಿಸಿದರು.

ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ರೆಡ್ಡಿಶ್ರೀನಿವಾಸ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ. ಗಂಗಾಧರಸ್ವಾಮಿ, ಪ್ರಚಾರ ಸಮಿತಿ ಅಧ್ಯಕ್ಷ ರಮೇಶ ನಾಯಕ, ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಸಿದ್ದಪ್ಪ ನೀರ್ಲೂಟಿ, ಜಿ.ಪಂ ಮಾಜಿ ಸದಸ್ಯ ವೀರೇಶ ಸಮಗಂಡಿ, ತಾ.ಪಂ ಪ್ರಭಾರ ಇಒ ಕೆ.ರಾಜಶೇಖರ, ಸಿಡಿಪಿಒ ವಿರೂಪಾಕ್ಷಿ, ತಾ.ಪಂ ಮಾಜಿ ಅಧ್ಯಕ್ಷ ಬಸಂತಗೌಡ ಪಾಟೀಲ, ಮಲ್ಲಿಕಾರ್ಜುನಗೌಡ, ಗ್ರಾ.ಪಂ ಅಧ್ಯಕ್ಷರಾದ ವೆಂಕಟೇಶ ತೊಗರಿ, ಮಹೇಶ ಬೇವೂರು ಇತರರು ಇದ್ದರು.

# ಸಂಸ್ಕಾರದಿಂದ ಜೀವನ ಸಾರ್ಥಕ: ಮೈನಳ್ಳಿಬಿಕನಳ್ಳಿಯ ಸಿದ್ದೇಶ್ವರ ಶಿವಾಚಾರ್ಯರು



**ಕೊಪ್ಪಳ :** 'ಜಂಗಮರು ಪೂರ್ವಜರ ಆಚಾರ ವಿಚಾರಗಳನ್ನು ಅರಿತು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಧರ್ಮರಕ್ಷಣೆಗೆ ಮುಂದಾಗಬೇಕು. ಪ್ರತಿಯೊಬ್ಬ ಮನುಷ್ಯ ಧರ್ಮ ಸಂಸ್ಕಾರಗಳ ಪಾಲಿಸಿದರೆ ಜೀವನ ಸಾರ್ಥಕವಾಗುತ್ತದೆ' ಎಂದು ಮೈನಳ್ಳಿ–ಬಿಕನಳ್ಳಿಯ ಸಿದ್ದೇಶ್ವರ ಶಿವಾಚಾರ್ಯರು ಹೇಳಿದರು.

ನಗರದ ರೇಣುಕಾಚಾರ್ಯ ಮಂದಿರದಲ್ಲಿ ವೀರಮಹೇಶ್ವರ ಕ್ಷೇಮಾಭಿವೃದ್ಧಿ ಸಂಘ, ಪತ್ತಿನ ಸಹಕಾರ ಸಂಘ ಇವುಗಳ ವಾರ್ಷಿಕ ಮಹಾಸಭೆ ಹಾಗೂ ಪ್ರತಿಭಾ ಪುರಸ್ಕಾರದ ಪ್ರಯುಕ್ತ ಭಾನುವಾರ ನಡೆದ ಜಂಗಮ ವಟುಗಳಿಗೆ ಅಯ್ಯಾಚಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಎಂಟು ವರ್ಷ ವಯಸ್ಸಿನ ಎಲ್ಲ ಜಂಗಮರು ಸಂಪ್ರದಾಯದಂತೆ ಅಯ್ಯಾಚಾರ ದೀಕ್ಷೆ ಪಡೆಯಬೇಕು. ಶಿವದೀಕ್ಷಾ ಪಡೆದ ವಟುಗಳು ಜೀವನದುದ್ದಕ್ಕೂ ನಿತ್ಯ ಸ್ನಾನದ ನಂತರ ಶಿವಪೂಜೆ ನೆರವೇರಿಸಬೇಕು, ಇದರಿಂದ ನಿಮ್ಮ ಭವಿಷ್ಯಕ್ಕೆ ಭದ್ರ ಬುನಾದಿ ದೊರೆಯುತ್ತದೆ' ಎಂದರು.

ಬ್ರಾಹ್ಮಿ ಮುಹೂರ್ತದಲ್ಲಿ 15ಕ್ಕೂ ಹೆಚ್ಚು ಜಂಗಮ ವಟುಗಳಿಗೆ ಸ್ವಾಮೀಜಿ ಅಯ್ಯಾಚಾರ ದೀಕ್ಷೆ ನೀಡಿದರು. ಇದಕ್ಕೂ ಮುನ್ನ ರೇಣುಕಾಚಾರ್ಯರ ಮೂರ್ತಿಗೆ ರುದ್ರಾಭಿಷೇಕ, ಹೂವಿನ ಅಲಂಕಾರ, ಮಹಾಪೂಜೆ ಜರುಗಿತು.

# ಎಫ್ ಐ ಆರ್ ಗೆ ಹೆದರುವುದಿಲ್ಲ : ಯತ್ನಾಳ್



**ವಿಜಯಪುರ :** ಮದ್ದೂರಿನಲ್ಲಿ ಮಾಡಿದ ಭಾಷಣಕ್ಕಾಗಿ ನನ್ನ ಮೇಲೆ ರಾಜ್ಯ ಸರ್ಕಾರ ಎಫ್ ಐ ಆರ್ ದಾಖಲಿಸಿದೆ. ಸರ್ಕಾರ ಅದೆಷ್ಟೇ ಎಫ್ ಐ ಆರ್ ಗಳನ್ನು ಹಾಕಿದರೂ ಸಹ ನಾನು ವಿಚಲಿತನಾಗುವುದಿಲ್ಲ ಎಂದು ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಎಕ್ಸ್ ಖಾತೆಯಲ್ಲಿ ಪ್ರತಿಕ್ರಿಯಿಸಿದ್ದಾರೆ.

ಗೋ ಮಾತೆಯ ಕೆಚ್ಚಲನ್ನು ಕತ್ತರಿಸಿದಾಗ, ಗಣೇಶ ವಿಸರ್ಜನೆ ನಡೆಯುತ್ತಿರುವಾಗ ಕಲ್ಲು ತೂರಾಟ ನಡೆಸಿದವರ ಮೇಲೆ, ಮಸೀದಿಯಲ್ಲಿ ಕಲ್ಲು ಶೇಖರಣೆ ಮಾಡಿ ಗಣೇಶೋತ್ಸವ ಹೋಗುತ್ತಿರುವಾಗ ಕಲ್ಲು ತೂರಿದವರ ಮೇಲೆ ಮೊದಲು ಕ್ರಮ ಕೈಗೊಳ್ಳಲಿ ಎಂದು ಅವರು ಹೇಳಿದ್ದಾರೆ.

ಹಿಂದೂಗಳ ಉತ್ಸವ, ಆಚರಣೆಗಳನ್ನು ಗುರಿಯಾಗಿಸಿಕೊಂಡು ಶಾಂತಿ ಕದಡುತ್ತಿರುವ ದುಷ್ಟ ಶಕ್ತಿಗಳ ಹೆಡೆ ಮುರಿಕಟ್ಟಲು ಆಗದ ರಾಜ್ಯ ಸರ್ಕಾರ ಹಿಂದೂಗಳ ಹಕ್ಕುಗಳನ್ನು ಪ್ರತಿಪಾದಿಸಿದ ನಮ್ಮಂತವರ ಮೇಲೆ ಕೇಸು ಹಾಕುತ್ತಿದೆ ಎಂದು ಟೀಕಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ಅಂತ್ಯ ಮದ್ದೂರಿನಿಂದಲೇ ಪ್ರಾರಂಭವಾಗಲಿದೆ. ಇದಕ್ಕೆ ಮೊನ್ನೆ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ಹಿಂದೂಗಳೇ ಸಾಕ್ಷಿ. ಹೆದರಿಸುವ, ಬೆದರಿಸುವ ಪ್ರಯತ್ನಕ್ಕೆ ಜಗ್ಗುವ ಮಾತೆ ಇಲ್ಲ ಎಂದು ತಿಳಿಸಿದ್ದಾರೆ.

# ಸಿಂದಗಿಯಲ್ಲಿ ಮನೆ ತೆರವು ವಿರೋಧಿಸಿ ಬಿಜೆಪಿ ಪ್ರತಿಭಟನೆ



**ವಿಜಯಪುರ :** ಜಿಲ್ಲೆಯ ಸಿಂದಗಿ ನಗರದಲ್ಲಿ 84 ಕುಟುಂಬಗಳ ಮನೆಗಳನ್ನು ತೆರವುಗೊಳಿಸಿ ನಿರ್ಗತಿಕರನ್ನಾಗಿ ಮಾಡಿರುವುದು ಅತ್ಯಂತ ಖಂಡನೀಯ, ಕೂಡಲೇ ಈ ಎಲ್ಲ ಕುಟುಂಬಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಒತ್ತಾಯಿಸಿ ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ನೇತೃತ್ವದಲ್ಲಿ ಬಿಜೆಪಿ ಜಿಲ್ಲಾ ಘಟಕದ ಪದಾಧಿಕಾರಿಗಳು ಶನಿವಾರ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಮಾತನಾಡಿ, ಬಡವರ ಮೇಲೆ ಗದಾಪ್ರಹಾರ ಮಾಡುವುದು ಸರಿಯಲ್ಲ, ತೆರವು ಕಾಮಗಾರಿ ನಡೆಸುವ ಪೂರ್ವದಲ್ಲಿ ಶಾಶ್ವತ ಪರಿಹಾರ ಕಲ್ಪಿಸುವುದನ್ನು ಬಿಟ್ಟು ಏಕಾಏಕಿ ಕಾಮಗಾರಿ ನಡೆಸಿದರೆ ಬಡವರು ಎಲ್ಲಿಗೆ ಹೋಗಬೇಕು ಎಂದು ಪ್ರಶ್ನಿಸಿದರು.

ಸಿಂದಗಿ ನಗರ ವ್ಯಾಪ್ತಿಯ ವಾರ್ಡ ನಂ–23 ರಲ್ಲಿನ ಸರ್ವೆ ಸಂ– 842/1ಅ ಕ್ಷೇತ್ರ 4 ಎಕರೆ ಪುರಸಭೆಯ ಜಮೀನಿನಲ್ಲಿ 2004 ನೇ ಸಾಲಿನಲ್ಲಿ ಅಂದಿನ ಶಾಸಕರು, ಪುರಸಭೆ ಅಧಿಕಾರಿಗಳು ಹಾಗೂ ತಹಶೀಲ್ದಾರರ ಸಮ್ಮುಖದಲ್ಲಿ ಸರಿಸುಮಾರು 84 ಮುಗ್ಧ, ಕೂಲಿಕಾರ್ಮಿಕ, ಬಡ ಕುಟುಂಬಗಳಿಗೆ ಹಕ್ಕುಪತ್ರ ವಿತರಣೆ ಮಾಡಿ ಎಲ್ಲ ಕುಟುಂಬಗಳಿಗೆ ಕಟ್ಟಡ ಪರವಾನಿಗೆ ನೀಡಿ ಪುರಸಭೆಗೆ ತೆರಿಗೆಯೂ ಕೂಡ ಭರಣ ಮಾಡಿದ್ದರು. ಈಗ 20 ವರ್ಷಗಳ ನಂತರ ಅದೇ ಕ್ಷೇತ್ರದ 2 ಎಕರೆ 10 ಗುಂಟೆ ಜಮೀನಿಗೆ ಹಾಗೂ 84 ಕುಟುಂಬಗಳಿಗೆ ತೆರವುಗೊಳಿಸಿ ಅನ್ಯಾಯವೆಸಗಿರುವುದು ನೋವು ತಂದಿದೆ. ಸಂಬಂಧಿಸಿದ ಸರ್ವೆ ಹಾಗೂ ಇನ್ನಿತರ ಆಡಳಿತ ಅಧಿಕಾರಿಗಳ ನಿರ್ಲಕ್ಷತನದಿಂದ ಇಂದು 84 ಕುಟುಂಬಗಳು ಬೀದಿಗೆ ಬರುವಂತಾಗಿದೆ ಎಂದು ಅಂಗಡಿ ಆಕ್ರೋಶ ವ್ಯಕ್ತಪಡಿಸಿದರು.

ಈ ಕಾರ್ಯದಿಂದಾಗಿ ಸುಮಾರು 2.5 ಕೋಟಿಗೂ ಹೆಚ್ಚಿನ ನಷ್ಟವಾಗಿದೆ. ದಿನನಿತ್ಯದ ಕಾರ್ಯಗಳು ಸ್ಥಗಿತಗೊಂಡು ಜನಜೀವನದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಈ ವಿಷಯವನ್ನು ಜಿಲ್ಲಾಡಳಿತ ಹಾಗೂ ಸರ್ಕಾರ ಗಂಭೀರವಾಗಿ ಪರಿಗಣಿಸಿ ಶಾಶ್ವತ ಪರಿಹಾರ ಕಲ್ಪಿಸಿ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಮುಖಂಡರಾದ ಚಂದ್ರಶೇಖರ ಕವಟಗಿ, ಸಂಜಯ ಪಾಟೀಲ ಕನಮಡಿ, ಶಿವರುದ್ರ ಬಾಗಲಕೋಟ, ಶಂಕರಗೌಡ ಪಾಟೀಲ, ಈರಣ್ಣ ರೇವೂರ, ನಗರ ಘಟಕದ ಅಧ್ಯಕ್ಷ ಸಂದೀಪ ಪಾಟೀಲ, ಪಾಲಿಕೆ ಮಾಜಿ ಸದಸ್ಯ ಉಮೇಶ ವಂದಾಲ, ಸಾಬು ಮಾಶ್ಯಾಳ, ಮಲ್ಲಮ್ಮ ಜೋಗೂರ, ಭರತ ಕೋಳಿ, ಬಸವರಾಜ ಹಳ್ಳಿ, ಗೇಸುದರಾಜ್ ಇನಾಮದಾರ, ಶೇಖರ ಬಾಗಲಕೋಟ, ಅಶ್ವಥ ರೆಬಿನಾಳ, ರಾಜೇಶ ತಾವಸೆ, ಸಂತೋಷ ನಿಂಬರಗಿ, ಪಾಪುಸಿಂಗ್ ರಜಪೂತ, ವಿಜಯ ಹಿರೇಮಠ, ರಾಜು ಬಿರಾದಾರ, ಅಪ್ಪು ಕುಂಬಾರ, ಮಹೇಂದ್ರ ನಾಯಕ, ನ್ಯಾಯವಾದಿ ಡೊಳ್ಳಿ ಮೊದಲಾದವರು ಪಾಲ್ಗೊಂಡಿದ್ದರು.

# ಧರ್ಮಸ್ಥಳ ನಂಬಿಕೆಗೆ ಹೆಸರಾದ ಕ್ಷೇತ್ರ. ಸೇವೆಯೇ ಇದರ ಉಸಿರು:ಜೆ ಚಂದ್ರಶೇಖರ



**ಜಮಖಂಡಿ :** ತಾಲೂಕಿನ ಸಾವಳಗಿಯ ಮಾಳಿ ಸಮುದಾಯ ಭವನದಲ್ಲಿ ಕಳೆದ ಎಂಟು ದಿನಗಳಿಂದ ಮದ್ಯವರ್ಜನ ಶಿಬಿರ ನಡೆಯಿತು. ಇಂದು 1974 ನೇ ಮದ್ಯವರ್ಜನ ಶಿಬಿರದ ಸಮಾರೋಪ ಸಮಾರಂಭ ಕಾರ್ಯಕ್ರಮ ಜರುಗಿತು. ದೀಪ ಪ್ರಜ್ವಲಿಸುವ ಮೂಲಕ ಉದ್ಘಾಟನೆ ಮಾಡಿ ಮಾತನಾಡಿದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ ಸಿ ಟ್ರಸ್ಟ್ (ರಿ) ಕಲ್ಯಾಣ ಕರ್ನಾಟಕದ ಪ್ರಾದೇಶಿಕ ನಿರ್ದೇಕರಾದ ಜೆ ಚಂದ್ರಶೇಖರ ಮಾತನಾಡಿ ಧರ್ಮಸ್ಥಳ ನಂಬಿಕೆಗೆ ಹೆಸರಾದ ಕ್ಷೇತ್ರವಿದು. ಸೇವೆಯೇ ಇದರ ಉಸಿರು. ಹಲವಾರು ಬಡ ಜನರ ಅಭಿವೃದ್ಧಿಗಾಗಿ ಗ್ರಾಮದಲ್ಲಿ ಅನೇಕ ಕಾರ್ಯಕ್ರಮ ಮಾಡುತ್ತಿದೆ ಇದರ ಪ್ರಯೋಜನಪಡೆದುಕೊಳ್ಳುವುದು.ಕುಡಿತದ ಬದುಕು ನರಕ. ಇಡಿ ಕುಟುಂಬವನ್ನು ನಾಶ ಮಾಡುವ ಚಟ. ಇದನ್ನು ಬಿಟ್ಟು ಎಲ್ಲಾ ಶಿಬಿರಾರ್ಥಿಗಳು ಮಾದರಿ ಬದುಕನ್ನು ಕಟ್ಟಿಕೊಳ್ಳುವಂತೆ ಉತ್ತಮ ಸಲಹೆ ಮತ್ತು ಮಾರ್ಗದರ್ಶನ ನೀಡಿದರು.

ಮುಖ್ಯಅತಿಥಿಗಳಾದ ಅಖಿಲ ಕರ್ನಾಟಕ ಜನ ಜಾಗೃತಿಯ ವೇದಿಕೆ(ರಿ) ರಾಜ್ಯಾಧ್ಯಕ್ಷರಾದ ನಟರಾಜ ಬದಾಮಿ ಇವರು ಮಾತನಾಡಿ ಯೋಜನೆಯಲ್ಲಿ ಬಡ ಜನರ ಏಳ್ಗೆಗಾಗಿ ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿದೆ. ನಿಮ್ಮ ಅಭಿವೃದ್ಧಿಗೆ ಅನ್ಯ ವ್ಯವಸ್ಥೆಗಳ ಮೊರೆ ಹೋಗುವ ಅವಶ್ಯಕತೆ ಇಲ್ಲ. ಯೋಜನೆಯು ಯಾವಾಗಲು ನಿಮ್ಮ ಅಭಿವೃದ್ಧಿಗಾಗಿ ಶ್ರಮಿಸುತ್ತದೆ. ದುಶ್ಚಟ ಎಂಬುದು ಒಂದು ಮನಸ್ಸಿನ ರೋಗ. ದೃಢ ಸಂಕಲ್ಪ ಮಾಡಿ ಕುಡಿತ ಮತ್ತು ಇತರೆ ದುಶ್ಚಟಗಳನ್ನು ಬಿಟ್ಟರೆ ನಿಮ್ಮ ಜೀವನಕ್ಕೆ ನೀವೆ ನಾಯಕರಾಗುತ್ತೀರಿ. ಉತ್ತಮ ಜೀವನ ಕಟ್ಟಿಕೊಳ್ಳಿ ಎಂದು ಮಾಹಿತಿ ಮಾರ್ಗದರ್ಶನ ನೀಡಿದರು.

ದಿವ್ಯಸಾನಿಧ್ಯ ವಹಿಸಿದ್ದ ಓಲೆ ಮಠದ ಪರಮ ಪೂಜ್ಯ ಶ್ರೀ ಆನಂದ ದೇವರು ಮಾತನಾಡಿ ಪೂಜ್ಯರಾದ ಡಾ. ಡಿ ವೀರೇಂದ್ರ ಹೆಗ್ಗಡೆಯವರು ದೂರ ದೃಷ್ಟಿತ್ವ ಶ್ಲಾಘನೀಯ. ಸಮಾಜದಲ್ಲಿ ಯಾವ ಸೇವೆ ನೀಡಿದರೆ ಜನರಿಗೆ ಹೆಚ್ಚು ಉಪಯುಕ್ತವಾಗುವುದು ಎಂಬುದನ್ನು ಸಾಬಿತುಪಡಿಸಿದ್ದಾರೆ. ಧರ್ಮಸ್ಥಳ ಯೋಜನೆಯಲ್ಲಿ ಇಷ್ಟೊಂದು ಬದಲಾವಣೆ ಇದೆ ಎಂದರೆ ಅದಕ್ಕೆ ಪೂಜ್ಯರ ಮತ್ತು ಅಮ್ಮನವರ ಆಶೀರ್ವಾದವೇ ಕಾರಣ. ಅವರು ಹಾಕಿ ಕೊಟ್ಟ ಹೆಜ್ಜೆಯಲ್ಲಿ ನಡೆದರೆ ನಿಮ್ಮ ಬದುಕು ಬಂಗಾರವಾಗುತ್ತೆ. ಕುಡಿತದಿಂದ ಸಮಾಜದಲ್ಲಿ ನಿಮಗೆ ಗೌರವ ಸಿಗಲ್ಲ. ಇದನ್ನು ಬಿಟ್ಟರೆ ಮಾತ್ರ ನೀವು ಮನುಷ್ಯರಾಗಿ ಬದುಕಲು ಸಾಧ್ಯ. ಇಲ್ಲದಿದ್ದರೆ ನಿಮ್ಮ ಬದುಕು ನರಕವಾಗುವುದು. ಈ ಶಿಬಿರದಲ್ಲಿ ಕಲಿಸಿದ ಪಾಠವನ್ನು ನೀವು ಯಾವತ್ತು ಮರೆಯಬಾರದು. ಇವುಗಳನ್ನು ಚಾಚು ತಪ್ಪದೇ ಪಾಲಸಿ ಉತ್ತಮ ಬದುಕು ಕಟ್ಟಿಕೊಳ್ಳಿ ಎಂದು ಆಶೀರ್ವಚನ ನೀಡಿದರು.

ಮದ್ಯವರ್ಜನ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾದ ಸುಶೀಲಕುಮಾರ ಬೆಳಗಲಿ ಮಾತನಾಡಿ ಶ್ರೀ ಧರ್ಮಸ್ಥಳ ಯೋಜನೆ ನಿಮ್ಮ ಕನಸನ್ನು ನನಸು ಮಾಡಲು ನಿಮ್ಮ ಮನೆ ಬಾಗಿಲಿಗೆ ಸೇವೆ ನೀಡುತ್ತಿದೆ. ಇಂತಹ ಕಾರ್ಯಕ್ರಮ ಮಾಡಲು ಯಾರು ಯೋಚಿಸುವುದಿಲ್ಲ. ಆದರೆ ಪೂಜ್ಯರು ನಿಮ್ಮ ಕುಟುಂಬ ಅಭಿವೃದ್ಧಿ ಹೊಂದಲಿ ಎಂದು ಪುಣ್ಯದ ಕೆಲಸ ಮಾಡುತ್ತಿದ್ದಾರೆ. ಈ ಶಿಬಿರದಿಂದ ನಿಮ್ಮ ಬದುಕನ್ನು ಬದಲಾಸಿಕೊಂಡು ದುಶ್ಚಟವನ್ನು ಬಿಟ್ಟು ಉತ್ತಮ ಪ್ರಜೆಗಳಾಗಿ ಬದುಕಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಜಿಲ್ಲಾ ನಿರ್ದೇಶಕರಾದ ಚನ್ನಕೇಶವ, ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷರಾದ ಶ್ರೀಕಾಂತ ಸಂದಿಮನಿ,ಪಂಡಿತ ಪಾರ್ಶ್ವನಾಥ ಉಪಾಧ್ಯೆ,ಉಮೇಶ ಜಾಧವ,ಶಂಕರ ಕಂಕನವಾಡಿ,ಬಸವರಾಜ ಮಾಳಿ,ರಾಜು ತಳವಾರ,ವಿನೋಭಾ ನ್ಯಾಮಗೌಡ, ಶಿವಾನಂದ ಬಿರಾದಾರ, ಜಗದೀಶ ಕಾಜಗಾರ,ಮಲ್ಲು ದಾನ್ನಿಗೊಂಡ,ಅಜಯ ಕಡಪಟ್ಟಿ, ಯೋಗ ಗುರುಗಳಾದ ಧೂಮಕೇತು ನಾಂದ್ರೇಕರ, ಜಿಲ್ಲಾ ಜನಗಜಾಗೃತಿ ವೇದಿಕೆ ಸದಸ್ಯರಾದ ಶ್ರೀಶೈಲಗೌಡ ಪಾಟೀಲ, ಶ್ರೀಮತಿ ಗೀತಾ ಸೂರ್ಯವಂಶಿ,ಶ್ರೀಧರ ಕನ್ನೂರ ಮತ್ತು ಪ್ರಭುಗೌಡ ಪಾಟೀಲ ಉಪಸ್ಥಿತರಿದ್ದರು.

ಕ್ಷೇತ್ರ ಯೋಜನಾಧಿಕಾರಿ ನಿಂಗಪ್ಪ ಜಿ, ಎಲ್ಲರನ್ನುಸ್ವಾಗತಿಸಿದರು.ಮೇಲ್ವಿಚಾರಕರಾದ ಶಿವಾನಂದ ನಿರೂಪಿಸಿದರು.ಪರಶುರಾಮ ವಂದಿಸಿದರು.

ಕಾರ್ಯಕ್ರಮದಲ್ಲಿಶೌರ್ಯಘಟಕದಸ್ವಯಂ ಸೇವಕರು, ನವ ಜೀವನ ಸಮಿತಿ ಸದಸ್ಯರು, ಒಕ್ಕೂಟದ ಪದಾಧಿಕಾರಿಗಳು, ಗುಂಪಿನ ಸದಸ್ಯರು ಸ್ಥಳೀಯ ಗ್ರಾಮಸ್ಥರು ಹಾಗೂ 71 ಶಿಬಿರಾರ್ಥಿಗಳನ್ನೊಳಗೊಂಡಂತೆ ಸುಮಾರು 400 ಜನ ಭಾಗವಹಿಸಿದ್ದರು

# ಶಿಕ್ಷಣ ಜೊತೆ ಮಾನವೀಯ ಮೌಲ್ಯ ಕಲಿಸಿ: ಸಂಸದ ರಮೇಶ ಜಿಗಣಗಿ




**ಇಂಡಿ :** ಶಿಕ್ಷಣದಲ್ಲಿ ಶಿಕ್ಷಕರ ಸ್ಥಾನ ಅತ್ಯಂತ ಪವಿತ್ರವಾಗಿದ್ದು ಮಕ್ಕಳ ಭವಿಷ್ಯ ಶಿಕ್ಷಕರ ಮೇಲಿದೆ ಶಿಕ್ಷಣದ ಜೊತೆಗೆ ಮಾನವೀಯ ಮೌಲ್ಯಗಳನ್ನು ಕಲಿಸಿ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದರು.

ನಗರದ ಇಂಟರ್ ನ್ಯಾಶನಲ್ ಯಾಪಲ್ ಇಂಗ್ಲೀಷ ಮಾಧ್ಯಮ ಪ್ರಾಥಮಿಕ ಪ್ರೌಢ ಶಾಲೆ ಆರಣದಲ್ಲಿ ಆಯೋಜಿಸಿದ ಶಾಲಾ ಸಂಸತ್ತು ಹಾಗೂ ಅಧಿಕಾರ ಪದಗ್ರಹಣ ಮತ್ತು ಪ್ರತಿಜ್ಞಾ ವಿಧಿ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು ಶಿಕ್ಷಣದಲ್ಲಿ ವಿಧ್ಯಾರ್ಥಿಗಳಿಗೆ ಮಾನವೀಯ ಮೌಲ್ಯಗಳನ್ನು ಬೆಳೆಸಿ, ಮಕ್ಕಳ ಭವಿಷ್ಯದಲ್ಲಿ ಪಾಲಕರ ಕರ್ತವ್ಯ ಕೂಡಾ ಮುಖ್ಯ ಒಳ್ಳೇಯ ಆಚಾರ.

ವಿಚಾರ ಸಂಸ್ಕಾರ, ಸಂಸ್ಕೃತಿ ಮನೆಯಲ್ಲಿ ಹೇಳಬೇಕು. ಮಕ್ಕಳನ್ನು ಭಾವಿ ಭವಿಷ್ಯತ್ತಿನ ಡಾ.ಎ.ಪಿ.ಜೆ ಅಬ್ದುಲ ಕಲಾಂ , ಡಾ.ರಾಧಾಕೃಷ್ಣನ ಇವರಂತಹ ಇನ್ನು ಅನೇಕ ಆದರ್ಶ ವ್ಯಕ್ತಿಗಳನ್ನಾಗಿ ಮಾಡಲು ಪ್ರೇರಣೆ ನೀಡಿ ಇಂದು ರಾಜಕಾರಣ ಕಲುಷಿತವಾಗಿದೆ ಗಬ್ಬೆದು ನಾರುತ್ತಿದೆ ಈ ಕಡೆ ತಲೆ ಹಾಕಬೇಡಿ ಒಳ್ಳೇಯವರಿಗೆ ಬೆಲೆ ಇಲ್ಲದಂತಾಗಿದೆ ಹಿಂದಿನ ರಾಜಕಾರಣಿಗಳಾದ ಜೆ.ಹೆಚ್ ಪಟೇಲ, ರಾಮಕೃಷ್ಣ ಹೆಗಡೆ ಇವರ ಗರಡಿಯಲ್ಲಿ ಬೆಳೆದ ನಾವು ಅವರ ನಡೇದು ಬಂದ ದಾರಿಯೇ ನನಗೆ ಪ್ರೇರಣೆಯಾಗಿದೆ.

ಯಾಪಲ್ ಶಾಲೆ ಪರಿಸರದ ಮಧ್ಯ ಕೇವಲ ಕೆಲ ವರ್ಷಗಳ ಹಿಂದೆ ಪ್ರಾರಂಭಿಸಿದ ಸಂಸ್ಥೆ ಬಹಳ ಎತ್ತರಕ್ಕೆ ಬೆಳೆದಿದೆ ಸಂಸದನಾಗಿ ನನಗೆ ಬಹಳ ಸಂತಸ ತಂದಿದೆ ಮುಂಬರುವ ದಿನಗಳಲ್ಲಿ ನನ್ನ ಅನುಧಾನದ ಅನುಪಾತದಲ್ಲಿ ಸಹಾಯ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಸಿ.ಆರ್.ಪಿ ರಮೇಶ ಬಗಲೂರ ಪ್ರಾಸ್ತಾವಿಕ ಮಾತನಾಡಿದರು.

ಇದೆ ಸಂದರ್ಬದಲ್ಲಿ ಪೂರ್ವಿಪತ್ರಿಕೆಯ ಸಂಪಾದಕ ಹಾಗೂ ಕನ್ನಡ ಪ್ರಭ ವರದಿಗಾರ ಖಾಜು ಸಿಂಗೆಗೋಳ ಇವರಿಗೆ ಬಸವಚೇತನ ಪ್ರಶೇಸ್ತಿ ನೀಡಿರುವುದರಿಂದ ಸಂಸ್ಥೆಯವತಿಯಿಂದ ಸನ್ಮಾನಿಸಲಾಯಿತು.

ಬಿಜೆಪಿ ಮುಖಂಡ ಕಾಸುಗೌಡ ಬಿರಾದಾರ, ಶೀಲವಂತುಮರಾಣಿ,ದೇವೆಂದ್ರಕುಂಬಾರ, ಅನೀಲಗೌಡ ಬಿರಾದಾರ, ಬತುಸಾಹುಕಾರ ಹಾವಳಗಿ, ಸಿ.ಆರ್.ಪಿ ರಮೇಶ ಬಗಲೂರ, ಮುಖ್ಯಗುರುಮಾತೆ ಸುಕನ್ಯಾ ಜವಳಿ, ದೈಹಿಕ ಶಿಕ್ಷಕ ಚಿದಾನಂದಗೌಡ ಬಿರಾದಾರ ವೇದಿಕೆಯಲ್ಲಿದ್ದರು.

# ವಚನ ಸಾಹಿತ್ಯ, ಶರಣ ಸಾಹಿತ್ಯ ಒಂದೇ: ಮಹೇಶ ಪೋತೆದ್ದಾರ



**ವಿಜಯಪುರ :** ಕನ್ನಡ ಭಾಷೆ ಹಾಗೂ ಸಾಹಿತ್ಯಕ್ಕೆ ಗಟ್ಟಿಯಾದ ಇತಿಹಾಸವಿದೆ. ವಚನ ಸಾಹಿತ್ಯ, ಶರಣ ಸಾಹಿತ್ಯ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದುಸಮಾಜಕಲ್ಯಾಣಇಲಾಖೆಯಉಪನಿರ್ದೇಶಕ ಮಹೇಶ ಪೋತೆದ್ದಾರ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಭಾನುವಾರ ನಡೆದ ವಚನ ಸಾಹಿತ್ಯ, ಶರಣ ಸಾಹಿತ್ಯ ಹಾಗೂ ಜಾನಪದ ಸಾಹಿತ್ಯದ ಕುರಿತ ಚಿಂತನಾಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದರು.

ಚಡಚಣದ ಸಂಗಮೇಶ್ವರ ಪದವಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಎಂ.ಎಸ್ ಮಾಗಣಗೇರಿ ಮಾತನಾಡಿ, ವಚನ ಸಾಹಿತ್ಯ ಹಾಗೂ ಶರಣ ಸಾಹಿತ್ಯ ನಮ್ಮ ಸಂಸ್ಕೃತಿಯ ಪ್ರತೀಕವಾಗಿದೆ. ಜಾನಪದ ಸಾಹಿತ್ಯ ನಮ್ಮ ಉಸಿರಿನಲ್ಲಿ ಉಸಿರಾಗಿ ಸೇರಿಕೊಂಡಿದೆ ಎಂದರು.

ಶರಣ ಸಾಹಿತ್ಯ ಹಾಗೂ ವಚನ ಸಾಹಿತ್ಯದ ಕುರಿತು ವಕೀಲ ಮಹಮ್ಮದಗೌಸ್ ಹವಾಲ್ದಾರ್ ವಿಶೇಷ ಉಪನ್ಯಾಸ ನೀಡಿದರು.

ಜಾನಪದ ನಡೆದು ಬಂದ ದಾರಿ ಹಾಗೂ ಜಾನಪದ ಸಾಹಿತ್ಯದಲ್ಲಿ ಗರತಿ' ಎಂಬ ವಿಷಯದ ಕುರಿತು ಅರ್ಜುಣಗಿ ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕಿ ಡಾ.ಸವಿತಾ ಝುಳಕಿ ವಿಶೇಷ ಉಪನ್ಯಾಸ ನೀಡಿದರು.

ಕಸಾಪ ಅಧ್ಯಕ್ಷ ಹಾಸಿಂಪೀರ ವಾಲಿಕಾರ, ಡಾ. ದಿಲೀಪರಾಜ ಪಾಟೀಲ, ಪ್ರೊ. ಶಿವಕುಮಾರ ಬಾಗಿ, ರಂಗನಾಥ ಚಂದಪ್ಪ ಅಕ್ಕಲಕೋಟ, ಜಯಶ್ರೀ ಹಿರೇಮಠ, ಸುಭಾಸ ಬೆಟಗೇರಿ, ಶಶಿಕಲಾ ನಾಯ್ಕೋಡಿ, ಜಗದೀಶ ಬೋಳಸೂರ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಡಾ. ಮಾಧವ ಗುಡಿ, ಶಿಕ್ಷಕಿ ಶಿಲ್ಪಾ ಭಸ್ಮೆ, ಪರವೀನ ಶೇಖ, ಅಭಿಷೇಕ ಚಕ್ರವರ್ತಿ, ಅರ್ಜುನ ಶಿರೂರ, ಮಲ್ಲಿಕಾರ್ಜುನ ಕೆಳಗಡೆ ಇದ್ದರು.

# ಯಾರಿಗೂ ಶೋಷಣೆ ಮಾಡದೇ ಪಾರದರ್ಶಕತೆಯಿಂದ ಕೆಲಸ ಮಾಡಿ : ಯಶವಂತರಾಯಗೌಡ ಪಾಟೀಲ

**ಇಂಡಿ :** ಕರ್ತವ್ಯ ಪ್ರಜ್ಞೆ,ಮನುಷ್ಯ ಧರ್ಮದಿಂದ ಕೆಲಸ ಮಾಡಬೇಕಾಗಿದೆ. ಯಾರಿಗೂ ಶೋಷಣೆ ಮಾಡದೇ ಪಾರದರ್ಶಕತೆಯಿಂದ ಕೆಲಸ ಮಾಡಿ ತಾಲೂಕಿನ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಶಾಸಕ ಯಶವಂತರಯಗೌಡ ಪಾಟೀಲ ಹೇಳಿದರು. ಪಟ್ಟಣದ ಗುರುಭವನದಲ್ಲಿ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ಇಂಡಿ ಇವರಿಂದ ನಡೆದ 2024–25 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಹಾಗೂ ಅನುಪಮಾ ಸೇವಾ ಪ್ರಶಸ್ತಿ ಮತ್ತು ಸರಕಾರಿ ನೌಕರರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ ಮಾತನಾಡುತ್ತಿದ್ದರು.

ಸರಕಾರವು ಬಡವರಿಗೆ ಮತ್ತು ಜನಸಾಮಾನ್ಯರಿಗೆ ರೂಪಿಸುವ ಯೋಜನೆಗಳು ಜನ ಸಾಮಾನ್ಯರಿಗೆ ಮುಟ್ಟಿಸುವ ಕೆಲಸ ಸರಕಾರ ನೌಕರರ ಮೇಲಿದೆ. ಜನರ ಮನಸ್ಸನ್ನು ಗೆದ್ದು ಸರಕಾರಿ ನೌಕರರು ಕೆಲಸ ಮಾಡುವ ಅವಶ್ಯಕತೆ ಇದೆ ಎಂದು ಅವರು ಹೇಳಿದರು.

ಐದು ಗ್ಯಾರಂಟಿ ಯೋಜನೆಗಳು ಜನರಿಗೆ ಪ್ರಾಮಾಣಿಕವಾಗಿ ತಲುಪಿಸುವ ಜವಾಬ್ದಾರಿ



ರಾಜ್ಯ ಸರಕಾರಿ ನೌಕರರ ಮೇಲಿದೆ. ಸರಕಾರಿ ನೌಕರರ ಒಪಿಎಸ್ ಕುರಿತು ರಾಜ್ಯದ ಮುಖ್ಯಮಂತ್ರಿ ಉಪಮುಖ್ಯಮಂತ್ರಿ ಮತ್ತು ವಿಧಾನಸಭೆಯಲ್ಲಿ ಗಮನ ಸೆಳೆಯುವದಾಗಿ ತಿಳಿಸಿದರು.

ರಾಜ್ಯ ಸರಕಾರಿ ನೌಕರರಿಗೆ 6 ನೇ ಮತ್ತು 7 ನೇ ವೇತನ ಆಯೋಗ ಕಾಂಗ್ರೆಸ್ ಸರಕಾರದ ನೀಡಿದೆ. ಹೀಗಾಗಿ ಸರಕಾರಿ ನೌಕರರು ಜನರ ಮನಸ್ಸು ಗೆಲ್ಲುವ ಶ್ರದ್ದೆಯಿಂದ ಕೆಲಸ ಮಾಡಬೇಕು ಎಂದರು.

ರಾಜ್ಯ ಹಿರಿಯ ಉಪಾಧ್ಯಕ್ಷ ಸರಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಸುರೇಶ ಶೇಡಶ್ಯಾಳ ಮಾತನಾಡಿ ಸರಕಾರಿ ನೌಕರರಿಗೆ ಒಪಿಎಸ ಜಾರಿಗೆ ಮಾಡಲು ಸರಕಾರದ ಗಮನ ಸೆಳೆಯಲು ಶಾಶಕರು ಪ್ರಾಮಾಣಿಕ ಪ್ರಯತ್ನ ಮಾಡಲು ವಿನಂತಿಸಿಕೊಂಡರು.

ತಾಲೂಕಾ ಘಟಕದ ಸಂಘದ ಅಧ್ಯಕ್ಷ ಬಸವರಾಜ ರಾಹೂರ ಮಾತನಾಡಿ ಸರಕಾರಿ ನೌಕರರ ಸಂಘದ ಅಕೌಂಟನಲ್ಲಿ ಒಟ್ಟು ನಿವ್ವಳ ಲಾಭ ಆರು ಲಕ್ಷ ಇದ್ದು ಒಂದು ಲಕ್ಷ 66 ಸಾವಿರ ಬ್ಯಾಂಕಿನಲ್ಲಿ ಉಳಿದಿದೆ. ಅದಲ್ಲದೆ ಸೇವೆ ಮಾಡುವ ಕೈಗಳು ಶ್ರೇಷ್ಠ ಎಂಬ ಭಾವನೆಯಲ್ಲಿ ನೌಕರರು ಕೆಲಸ ಮಾಡುತ್ತಿದ್ದು ತಾಲೂಕಿನ ಪ್ರಗತಿಗೆ ಪೂರಕ ಕೆಲಸ ಮಾಡುವ ಜವಾಬ್ದಾರಿ ಸರಕಾರಿ ನೌಕರರ ಮೇಲಿದೆ ಎಂದರು.

ಲಕ್ಷ್ಮೀಕಾಂತ ಮೇತ್ರಿ,ಧರ್ಮರಾಜ ಮುಜಗೊಂಡ,ಆರ್.ಪಿ.ಗಿಣ್ಣಿ,ಧರ್ಮರಾಜ ಮುಜಗೊಂಡ ಮಾತನಾಡಿದರು.

ಸರಕಾರಿ ನೌಕರರಾದ ಮಹಾದೇವಪ್ಪ ಏವೂರ, ಗೀತಾ ಗುತ್ತರಗಿಮಠ, ಉಮೇಶ ಲಮಾಣಿ,ಸಿ.ಪಿ. ಗಣ್ಣನವರ ಎಸ್. ಆರ್. ನಡಗಡ್ಡಿ, ಎಂ.ಎಂ.ಸಂಜವಾಡ, ಶೃತಿಖೇಡಗಿ, ಎಸ್.ಎಸ್.ಮೋದಿ, ಡಬ್ಲೂ ಐ ಇಂಡಿಕರ ಮತ್ತಿತರನ್ನು ಅನುಪಮ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವೇದಿಕೆಯ ಮೇಲೆ ಇಒ ಬಿ.ಎಚ್.ಕನ್ನೂರ, ಶಿವರಾಜ ಬಿರಾದಾರ, ಶಿವಾನಂದ ಮಂಗಾನವರ, ವಿಜಯಕುಮಾರ ಕ್ಷತ್ರಿ ಮತ್ತಿತರಿದ್ದರು.

ನಂತರ ಸರಕಾರಿ ನೌಕರರಿಗೆ ಸ್ಪಂದನಾ ಆಸ್ಪತ್ರೆಯ ಸಹಯೋಗದಲ್ಲಿ ಆರೋಗ್ಯ ತಪಾಸಣೆ ಮಾಡಲಾಯಿತು.

# 210 ಕ್ವಿಂಟಾಲ್ ಪಡಿತರ ಅಕ್ಕಿ ಅಕ್ರಮ ಸಾಗಾಟ: ಮೂವರ ಬಂಧನ

**ವಿಜಯಪುರ :** ನಗರದ ವಿಜಯಾ ಟಯರ್ಸ್ ಎದುರುಗಡೆ ಸರ್ವೀಸ್ ರಸ್ತೆಯಲ್ಲಿ ಲಾರಿಯಲ್ಲಿ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ ದಾಳಿ ನಡೆಸಿ, 4,76,310 ಮೌಲ್ಯದ 210 ಕ್ವಿಂಟಲ್ ಅಕ್ಕಿಯನ್ನು ವಶಪಡಿಸಿಕೊಂಡು ಮೂವರು ಆರೋಪಿಗಳನ್ನು ಬಂಧಿಸಲಾಗಿದೆ.



ಬೆಳಗಾವಿ ಜಿಲ್ಲೆ ಅಥಣಿ ತಾಲ್ಲೂಕಿನ ಆಜೂರ ಗ್ರಾಮದ ಚಾಲಕ ಗಜಾನನ ಮಕಾಳೆ(31), ಗಣೇಶವಾಡಿಯ ಮಾರುತಿ ದೊಡಮನಿ ಮತ್ತು ಬೆಳಗಾವಿಯ ಅಜಾದ್ ನಗರದ ಇಕ್ಬಾಲ್ ತಹಶೀಲ್ದಾರ ಎಂಬುವವರನ್ನು ಬಂಧಿಸಲಾಗಿದೆ.

ಆರೋಪಿಗಳು ಯಾವುದೇ ಲೈಸೆನ್ಸ್ ಪಡೆಯದೇ ವಿಜಯಪುರದಲ್ಲಿರುವ ಎಫ್‌ಸಿಐ ರೈಲ್ವೆ ಗೂಡ್ಸ್ ಶೆಡ್ಡಿನಿಂದ 426 ಚೀಲ ಅಕ್ಕಿಯನ್ನು ಲಾರಿಯಲ್ಲಿ ಸಾಗಿಸುವಾಗ ದಾಳಿ ನಡೆಸಿ, ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಆಹಾರ ನಿರೀಕ್ಷಕ ವಿಜಯಕುಮಾರ ಗುಮಶೆಟ್ಟಿ, ಸೀತಾರಾಮ ಲಮಾಣಿ ಹಾಗೂ ಆದರ್ಶನಗರ ಠಾಣೆ ಪಿಎಸ್ಐ ಪಿ.ಎಸ್.ಕುಚಬಾಳ, ಸಿಬ್ಬಂದಿ ಆರ್.ಎಸ್. ಮರೆಗುದ್ದಿ, ಪಿ.ಎಸ್.ಆಜೂರ, ಮಸ್ತಾನ ಬಗಲಿ ಜಂಟಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಆದರ್ಶನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಹೆಸ್ಕಾಂ ಗ್ರಾಮೀಣ ಉಪ ವಿಭಾಗ ಸ್ಥಳಾಂತರಿಸದಿರಲು ಮನವಿ

**ವಿಜಯಪುರ :** ಹೆಸ್ಕಾಂ ಗ್ರಾಮೀಣ ಉಪ ವಿಭಾಗವನ್ನು ಶಿವಗಿರಿಗೆ ಸ್ಥಳಾಂತರ ಮಾಡುವುದನ್ನು ತಡೆಹಿಡಿಯುವಂತೆ ಒತ್ತಾಯಿಸಿ ರೈತ ಭಾರತ ಪಕ್ಷದಿಂದ ಹೆಸ್ಕಾಂ ಅಧೀಕ್ಷಕ ಅಭಿಯಂತರ ಅವರ ಮೂಲಕ ಶುಕ್ರವಾರ ಹುಬ್ಬಳ್ಳಿ ಹೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ನಾಗಠಾಣ ಮತಕ್ಷೇತ್ರದ ಶಾಸಕ ವಿಠ್ಠಲ್ ಕಟಕದೊಂಡ ಅವರಿಗೂ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ರೈತ ಭಾರತ ಪಕ್ಷದ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಕೆಂಗನಾಳ ಮಾತನಾಡಿ,ಹೊಸಕಟ್ಟಡವನ್ನುಕಟ್ಟಿಸಿರುತ್ತೀರಿ ಅಂತ ಅಲ್ಲಿಗೆ ಗ್ರಾಮೀಣ ಉಪವಿಭಾಗವನ್ನು ಸ್ಥಳಾಂತರ ಮಾಡುವ ಕುರಿತು ಎಲ್ಲರೂ ಹೇಳುತ್ತಿದ್ದು ಇದರಿಂದ ಎಲ್ಲಾ ಹಳ್ಳಿಯ ಜನರಿಗೆ ನೇರವಾಗಿ ತಮ್ಮ ಕೆಲಸಗಳನ್ನು ಮಾಡಿಕೊಳ್ಳಲು ಅನಾನುಕೂಲಗಳೆ ಜಾಸ್ತಿ ಆಗುತ್ತವೆ. ಏನೆಂದರೆ ನೇರವಾಗಿ ಅಲ್ಲಿಗೆ



ಹೋಗಲು ಬಸ್ಸಿನ ಸೌಕರ್ಯವನ್ನು ಇರುವುದಿಲ್ಲ ಮತ್ತು ಗ್ರಾಹಕರಿಗೆ ಇದರಿಂದ ಅನುಕೂಲವಾಗುವುದಿಲ್ಲ. ಆದ ಕಾರಣ ಕೂಡಲೇ ಗ್ರಾಮೀಣ ಉಪ ವಿಭಾಗವನ್ನು ಸ್ಥಳಾಂತರ ಮಾಡದೆ ಇದ್ದ ಜಾಗದಲ್ಲಿಯೇ ಮುಂದುವರಿಸಿ ವಿಜಯಪುರ ನಗರದಲ್ಲಿ ಇನ್ನೊಂದು ಉಪ ವಿಭಾಗವನ್ನು ಮಾಡಿ ಈ ಭಾಗದ ಜನರು ತಮ್ಮ ದಿನ ನಿತ್ಯದ ಕೆಲಸಗಳಿಗೆ ಎಂಬಿ ಪಾಟೀಲ್ ನಗರಕ್ಕೆ ಹೋಗಿ ಬರುವುದು ತುಂಬಾ ಅನಾನುಕೂಲವಾಗುತ್ತದೆ. ಈಗಿರುವ ಕಟ್ಟಡದಲ್ಲಿ ವಿಜಯಪುರ ನಗರ ವಿಭಾಗ –3 ನ್ನು ಆರಂಭಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಮತ್ತು ಗ್ರಾಮೀಣ ಉಪ ವಿಭಾಗವನ್ನು ಸ್ಥಳಾಂತರ ಮಾಡಬಾರದೆಂದು ಕೇಳಿಕೊಳ್ಳುತ್ತೇವೆ. ಒಂದು ವೇಳೆ ಸ್ಥಳಾಂತರ ಮಾಡಲು ಮುಂದಾದರೆ ಉಗ್ರಹೋರಾಟವನ್ನು ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಈ ಸಂದರ್ಭದಲ್ಲಿ ಹೆಗಡಿಹಾಳ ತಾಂಡಾದ ಮುಖಂಡರಾದ ಗಂಗಾರಾಮ ರಾಠೋಡ ಉಪಸ್ಥಿತರಿದ್ದರು.

# ಪಿಂಜಾರ ನದಾಫ್ ಜನಾಂಗದವರು ಜಾತಿ ಪಿಂಜಾರ/ನದಾಫ್ ಧರ್ಮ ಇಸ್ಲಾಂ ಕುಲಕಸಬು ಹತ್ತಿ ಶುದ್ದಗೊಳಿಸುವದು ಎಂದು ತಪ್ಪದೇ ಬರೆಸಿರಿ: ಗಣದಿನ್ನಿ

**ವರದಿ.ಶಾಮೀದ್‌ಅಲಿ.ಕರಡಕಲ್.**

**ಲಿಂಗಸುಗೂರು :** ತಾಲೂಕಿನ ಸಜ್ಜಲಶ್ರೀ ಐ.ಟಿ.ಐ.ಕಾಲೇಜಿನಲ್ಲಿ ಪಿಂಜಾರ ನದಾಫ್ ಜನಾಂಗದವರ ಸಭೆಯನ್ನು ಕರೆದು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕು–ರಿತು ಚರ್ಚಿಸಲು ಪೂರ್ವ ಭಾವಿ ಸಭೆ ಕರೆಯಲಾಗಿ

ಕರ್ನಾಟಕರಾಜ್ಯದಪಿಂಜಾರನದಾಫ್‌ಸಂಘ ಜಿಲ್ಲೆ ಘಟಕ ಹಾಗೂ ತಾಲೂಕ ಘಟಕ ನಗರ ಘಟಕ ವತಿಯಿಂದ ಇಂದು ಸಾಮಾಜಿ–ಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾಡಲಿದೆ ಸಂಭಂದಿಸಿದಂತೆ ಪಿಂಜಾರ.ನದಾಪ್ ಜನಾಂಗದ . ಪೂರ್ವಭಾವಿ ಸಭೆಯನ್ನು ಕರೆದು

ಚರ್ಚೆ ಯೊಂದಿಗೆ ಮುಂದಿನ ದಿನಮಾನಗಳಲ್ಲಿರಾಜ್ಯದಲ್ಲಿರುವಪಿಂಜಾರ್ ನದಾಫ್ ಜನಾಂಗದವರು ಜನಾಂಗದ ಮಕ್ಕಳ ಭವಿಷ್ಯದಲ್ಲಿ ಸರ್ಕಾರದಿಂದ ಮುಂದೆ ಪಡಿಯಬಹುದಾದ ಸೌಲಭ್ಯಗಳು ಮೀಸಲಾತಿ ಹಾಗೂ ಇತರ ಎಲ್ಲಾ ರೀತಿಯ ಸಾಧಕ ಬಾಧಕಗಳನ್ನು ಅರಿತುಕೊಂಡು ನಮ್ಮ ಜಾತಿ ಪಿಂಜಾರ ನದಾಫ್ ಎಂದು ಬರೆಸುವುದು ಬಹಳ ಅವಶ್ಯ ಇರುತ್ತದೆ .

ಈಗಾಗಲೇ ಕರ್ನಾಟಕ ಸರ್ಕಾರದಲ್ಲಿ ವಿಶೇಷವಾಗಿರುವ ಪ್ರವರ್ಗ––1 ಹಾಗೂ ಕೇಂದ್ರ ಸರ್ಕಾರದಲ್ಲಿ ಅತ್ಯಂತ ಹಿಂದುಳಿದ ಒಬಿಸಿಯಲ್ಲಿ ರಾಜ್ಯ ಮತ್ತು ಕೇಂದ್ರದ ಹಿಂದುಳಿದವರ್ಗಗಳಇಲಾಖೆಗಳಮೂಲಕ ಮೀಸಲಾತಿ ಸೌಲಭ್ಯ ಪಡೆದುಕೊಳ್ಳುತ್ತಿದ್ದೇವೆ



.ಈ ಮೀಸಲಾತಿ ಸೌಲಭ್ಯಗಳ ಆಧಾರದ ಮೇಲೆ ನಮ್ಮ ಸಮಾಜಕ್ಕೆ ಮುಂದಿನ ಭವಿಷ್ಯದಲ್ಲಿ ಉಪಯುಕ್ತವಾಗುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಸಾಮಾಜಿ–ಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ನಿಮ್ಮ ಮನೆ ಮನೆ ಬಾಗಿಲಿಗೆ ಬಂದಾಗ ತಾವುಗಳು ಈ ಕಡ್ಡಾಯವಾಗಿ ಬರಸತಕ್ಕದ್ದು

ಕ್ರಮ ಸಂಖ್ಯೆ08 ಎಂದಲ್ಲಿ ಧರ್ಮ––– ಇಸ್ಲಾಂ

ಅಂತ ಕ್ರ.ಸಂ.9 ಎಂದಲ್ಲಿ ಪಿಂಜಾರ ಅಥ–ವಾ ನದಾಫ್ ಕ್ರ.ಸಂ.10 ಉಪಜಾತಿ–– ––––––ಏನನ್ನು ಬರೆಯಬಾರದು. ಕ್ರ.ಸಂ.30ಇದ್ದಲ್ಲಿ ಕುಲಕಸುಬು.ಇಲ್ಲಿ ಹತ್ತಿ ಶುದ್ದಗೋಳಿಸುವದು.ಎಂಧು ತಪ್ಪದೇ ಬರೆಸಿರಿ.

.ಇದು ಕರ್ನಾಟಕ ಸರ್ಕಾರ ದಿನಾಂಕ 22/9/2025 ರಿಂದ 7.10.2025 ರವರೆಗೆ ರಾಜ್ಯದ ಎಲ್ಲಾ ಜನಾಂಗಗಳ ಸಾಮಾಜಿ–ಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾಡಲಿದೆ

ಈ ಸಮೀಕ್ಷೆಯಲ್ಲಿ ರಾಜ್ಯದಲ್ಲಿರುವ ನಾವುಗಳು ವಾಸಿಸುವ ಅಂಕಿ ಅಂಶಗಳಿಗೆ ಅನುಗುಣವಾಗಿ ನಮ್ಮ ಜನಾಂಗದ ಹಾಗೂ ಮಕ್ಕಳ ಭವಿಷ್ಯದಲ್ಲಿ ಸರ್ಕಾರದಿಂದ ಮುಂದೆ ಪಡೆಯಬಹುದಾದ ಸೌಲಭ್ಯಗಳು ಮೀಸಲಾತಿ ಹಾಗೂ ಇತರ ಎಲ್ಲಾ ರೀತಿಯ ಸಾಧಕ ಪಾದಕಗಳನ್ನು ಅರಿತುಕೊಂಡು ನಮ್ಮ ಜಾತಿ ನಮೋದಿಸುವುದು ಬಹಳ ಅವಶ್ಯಕ ಇರುತ್ತದೆ ಎಂದು

ಮೌಲಾಸಾಬ್ ಗಣದಿನ್ನಿ ಜಿಲ್ಲಾಧ್ಯಕ್ಷರು ಕ. ರಾ.ಪಿ.ನ.ಸಂಘ ರಾಯಚೂರು ತಿಳಿಸುತ್ತಾ ಮಾತನಾಡಿದರು.ಹಾಗೂ ಮಹೆಬೂಬ್ ಸಾಬ್ ನಿ.ಜೆಇ.ಕಲ್ಬುರ್ಗಿ ವಿಭಾಗೀಯ ಉಪಾಧ್ಯಕ್ಷರು ಕ.ರಾ.ಪಿ.ನ.ಸಂ. ಹಾಗೂ ಸಂಘದ ಅಭಿವೃದ್ಧಿಗೆ ಸ್ಪಂದನೆ ವಿರುವದಿಲ್ಲ.ಇದೂವರೆಗೆ ಸಮಾಜದ ಹಿತದೃಷ್ಟಿಯಿಂದ ಯಾವ ಅಭಿವೃದ್ಧಿ ಕಾರ್ಯಗಳನ್ನು ಮಾಡದಿರುವದರ ಬಗ್ಗೆ ಹಾಗೂ ಇದುವರೆಗೂ ತಾಲೂಕ ಮಟ್ಟದ ಪದಾಧಿಕಾರಿಗಳನ್ನಆಯ್ಕೆಮಾಡಿರುವುದಿಲ್ಲ ವೆಂದು ತಾಲೂಕು ಸಮಿತಿಯ ಕಾರ್ಯ ಚಟುವಟಿಕೆಗಳ ಕುರಿತು ಮಾತನಾಡಿದರು ಮಾಹಿತಿಕೊರತೆಯ ಕಾರಣದಿಂದ ಜಿಲ್ಲಾಧ್ಯಕ್ಷರಾದ ಮೌಲಾಸಾಬ ಗಣದಿನ್ನಿ ಯವರು ಸಮರ್ಥಿಸಿಕೊಂಡಿದ್ದಾರೆ ಮುಂದಾಗಿ ತಾಲೂಕ ಅಧ್ಯಕ್ಷರಾದ ಟಿ.ಅಮೀನುದ್ಧೀನ್ ರವರು ಪ್ರಶ್ನೆ ಗಳ ಸುರಿಮಳೆ ಯನ್ನೇ ಸು–ರಿಸಿದರು.

ನಗರ ಘಟಕದ ಅಧ್ಯಕ್ಷ.ರಾದ ಡಾ.ಶಾಮೀಧ್ ಅಲಿ ಕರಡಕಲ್ ರವರು ಮೌನ ತಾಳಿದ್ದರು. ಏಕೆಂದರೆ.ಸುಮಾರು 20ವರ್ಷಕ್ಕೂಅಧಿಕ ವರ್ಷ ಆಡಳಿತ ಚುಕ್ಕಾಣಿ ಹಿಡಿದಿರುವ ಹಿರಿಯರು ಮಾತನಾಡಿ ಸಭೆಯಲ್ಲಿ ತಿಳಿಸದೆ ಮೌನವಹಿಸಿದ್ದರು.

ಉತ್ತರಿಸುವಲ್ಲಿ ವಿಫಲರಾಗಿದ್ದರು. ಯಮನೂರಸಾಬ ನಧಾಪ್ ಮುದುಗಲ್ ಅಮೀನಸಾಬ ಮಟ್ಟೂರು .ಖಾಜಾಹುಸೇನಸಾಬ ಹಸನಸಾಬ. ಅಮೀನ್ ಸಾಬ್ ಬಂಡಿ ಭಾಗವಹಿಸಿದ್ದರು ಈ ಸಂದರ್ಭದಲ್ಲಿ ಖಾದರ್ ಸಾಬ್ ಖಾಜಾ ಹುಸೇನಸಾಬ ಹುಸೇನಸಾಬ ಇವರಿಗೆ ಸಮಾಜದವತಿಯಿಂದಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಲಿಂಗಸುಗೂರು. ಕಸಬಾ.ಲಿಂಗಸೂಗೂರು. ಕರಡಕಲ್. ಹಟ್ಟಿ ಕೋಟಾ ಭೂಪೂರ.

ಆನಾಹೊಸೂರು ಗುಂತಗೊಳ ಮುದುಗಲ್ಇನ್ನಿತರ ಗ್ರಾಮಗಳಿಂದ ಪಿಂಜಾರನದಾಫ್ ಜನಾಂಗದ ಬಾಂಧವರು ಆಗಮಿಸಿದ್ದರು.

# ಸುದ್ದಿ ಮಾಧ್ಯಮದಲ್ಲಿ ಅಂಬೇಡ್ಕರ್ ದೃಷ್ಟಿಕೋನದ ಮರ್ಯಾದೆಗೇಡು ಹತ್ಯೆ



**ಚಿತ್ರದುರ್ಗ :** ಜಾತಿ ಶ್ರೇಷ್ಠತೆಯ ವ್ಯಸನದ ಮನುಸ್ಮೃತಿಯ ಘರ್ ವಾಪ್ಸಿಗೆ ನಿರಂತರ ಷಡ್ಯಂತ್ರ ನಡೆಯುತ್ತಿದ್ದು ಇದು ಸಾಧ್ಯವಾಗದಂತೆ ತಡೆದು ನಿಲ್ಲಿಸಿರುವುದು ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನ. ಈ ಕಾರಣಕ್ಕೇ ಸಂವಿಧಾನದ ಕುತ್ತಿ–ಗಿಗೇ ಕೈ ಹಾಕಲಾಗುತ್ತಿದೆ. ಇದಕ್ಕೆ ಸುದ್ದಿ ಮಾಧ್ಯಮ ಮೂಕಸಾಕ್ಷಿಯಾಗಿರುವುದು ಅಪಾಯಕಾರಿ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅಭಿಪ್ರಾಯಪಟ್ಟರು.

ಮಾಧ್ಯಮ ಅಕಾಡೆಮಿ, ವಾರ್ತಾ ಮತ್ತು ಪ್ರಚಾರ ಇಲಾಖೆ, ಹ್ಜಿಬೂನ್ಜಿ ಸಂಪಾದಕರ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ "ಸುದ್ದಿ ಮಾಧ್ಯಮದಲ್ಲಿ ಅಂಬೇಡ್ಕರ್ ದೃಷ್ಟಿಕೋನ" ವಿಚಾರಗೋಷ್ಠಿಯನ್ನು ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ಹೊತ್ತಿನ ಬಹಳ ಪತ್ರಕರ್ತರ ಕೈಯಲ್ಲಿ ವಿಚಾರ, ವಿಮರ್ಷೆಗಿಂತ ಹೆಚ್ಚಾಗಿ ಪೆಟ್ರೋಲ್, ಬೆಂಕಿಪೊಟ್ಟಣವೇ ಹೆಚ್ಚಾಗಿದೆ. ಕಡ್ಡಿಗೀರುವ ಅವಕಾಶಕ್ಕಾಗಿ ಕಾಯುತ್ತಿರುವಂತೆ ಕಾಣುತ್ತಾ–ರೆ. ಪ್ರಜಾಪ್ರಭುತ್ವದ ಪ್ರಾಣ ಪಕ್ಷಿ ಸುದ್ದಿ ಸಂಸ್ಥೆಗಳ ಕೈಯಲ್ಲಿದೆ. ಪ್ರಾಣ ಉಳಿಸುವುದು, ಬಿಡುವುದು ಇವರಿಗೇ ಬಿಟ್ಟಿದೆ ಎಂದು ವಿವರಿಸಿದರು.

ಸುದ್ದಿ ಮಾಧ್ಯಮದ ಆತ್ಮ ಆಗಿರುವ "ವಾಕ್ ಸ್ವಾತಂತ್ರ್ಯ ಮತ್ತು ಜಾತ್ಯತೀತತೆ ಹಾಗೂ ಸಾಮಾಜಿಕ ನ್ಯಾಯ"ವೇ ಅಂಬೇಡ್ಕರ್ ದೃಷ್ಟಿಕೋನದ ಆತ್ಮವೂ ಆಗಿದೆ. ಅಂಬೇಡ್ಕರ್ ಕೊಟ್ಟ ಸಂವಿಧಾನದ ಮೌಲ್ಯವೂ ಆಗಿದೆ ಎಂದು ಅಭಿಪ್ರಾಯಪಟ್ಟರು.

ಇವತ್ತಿನ ಸುದ್ದಿ ಮಾಧ್ಯಮಗಳ ರಚನೆ ಮತ್ತು ಆಚರಣೆಯಲ್ಲಿ ಜಾತ್ಯತೀತತೆ ಆತ್ಮಹತ್ಯೆ ಮಾಡಿಕೊಂಡಿರುವುದರಿಂದ, ಅಂಬೇಡ್ಕರ್ ದೃಷ್ಟಿಕೋನದ ಮರ್ಯಾದೆಗೇಡು ಹತ್ಯೆ ನಡೆಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ದೇಶದಲ್ಲಿ ಎರಡು ತದ್ವಿರುದ್ಧವಾದ ಬೆಳವಣಿಗೆಗಳು ಅತೀ ವೇಗವಾಗಿ ನಡೆಯುತ್ತಿವೆ.

ಒಂದು ಅಂಬೇಡ್ಕರ್ ಅವರ ವಿಗ್ರಹಗಳನ್ನು ಅತೀ ಹೆಚ್ಚು ನಿರ್ಮಿಸುತ್ತಲೇ ಅಂಬೇಡ್ಕರ್ ಅವರ ವಿಚಾರಗಳನ್ನು ಕೊಲ್ಲುವ ಪ್ರಕ್ರಿಯೆ ಕೂಡ ಹೆಚ್ಚು ವೇಗ ಪಡೆದುಕೊಂಡಿದೆ. ವಿಗ್ರಹಗಳನ್ನು ಸ್ಥಾಪಿಸಿ, ವಿಚಾರಗಳನ್ನು ಕೊಲ್ಲುವ ಈ ವಿದ್ಯಮಾನಕ್ಕೆ ಸುದ್ದಿ ಮಾಧ್ಯಮ " ಮೂಕಸಾಕ್ಷಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ತಮ್ಮ 65 ವರ್ಷಗಳ ಜೀವಿತಾವಧಿಯಲ್ಲಿ ಅರ್ಧಕ್ಕೂ ಹೆಚ್ಚುಆಯಸ್ಸನ್ನುಅಂಬೇಡ್ಕರ್‌ಅವರುಪತ್ರಕರ್ತರಾಗಿ, ಸಂಪಾದಕರಾಗಿ, ಲೇಖಕರಾಗಿ, ಬರಹಗಾರರಾಗಿ ಕಳೆದಿದ್ದಾರೆ.

ವಿಧಾನ ಪರಿಷತ್ ಸದಸ್ಯರಾದ ನವೀನ್ ಉದ್ಘಾಟಿಸಿದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತರಾದ ಡಿ.ಉಮಾಪತಿ ಅವರು ಆಶಯ ಮಾತುಗಳನ್ನಾಡಿದರು. ಮಾಧ್ಯಮ ಅಕಾಡೆಮಿ ಅಧ್ಯಕ್ಷರಾದ ಆಯೆಷಾ ಖಾನುಂ ಅಧ್ಯಕ್ಷತೆ ವಹಿಸಿದ್ದರು. ಅಕಾಡೆಮಿಯ ಕಾರ್ಯದರ್ಶಿ ಸಹನಾ ಭಟ್, ಅಕಾಡೆಮಿ ಸದಸ್ಯರಾದ ಅಹೋಬಳಪತಿ ಸೇರಿ SC/ST ಸಂಪಾದಕರ ಸಂಘದ ಪದಾಧಿಕಾರಿಗಳು ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

# ದಾಳಿಂಬೆ ಬೆಳಗಾರರ ಪತ್ತಿನ ಸಹಕಾರಿ ಸಂಘವು 78 ಲಕ್ಷ 30 ಸಾವಿರ ನಿವ್ವಳ ಲಾಭ: ಕೆ.ಎಲ್. ಬಿಲಕೇರಿ

**ಕಲಾದಗಿ :** ನಮ್ಮ ದಾಳಿಂಬೆ ಬೆಳೆಗಾರರ ಪತ್ತಿನಸಹಕಾರಿ ಸಂಘವು ಪ್ರಸ್ತುತ ವರ್ಷದಲ್ಲಿ 78.30.087 ನಿವ್ವಳ ಲಾಭಗಳಿಸಿದೆ. ಎಂದು ಸಂಘದ ಅಧ್ಯಕ್ಷ ಕೆ ಎಲ್ ಬಿಲಕೇರಿ ಹೇಳಿದರು.

ರವಿವಾರ ಹಣ್ಣು ಬೆಳೆಗಾರರ ಪ್ರೌಢ ಶಾಲಾ ಸಭಾಭವನದಲ್ಲಿ ನಡೆದ ದಾಳಿಂಬೆ ಬೆಳೆಗಾರರ ಪತ್ತಿನ ಸಹಕಾರಿ ಸಂಘದ 18ನೇ ವಾರ್ಷಿಕ ಸರ್ವ ಸಾಧಾರಣ ಸಭೆ ಸಭೆಯಲ್ಲಿ ಮಾತನಾಡಿದ ಅವರು. ನಮ್ಮ ಸಂಘವು 744 ಜನ ಸದಸ್ಯರೊಂದಿಗೆ 12 ಲಕ್ಷ ಶೇರು ಸಂಗ್ರಹ ದೊಂದಿಗೆ ಪ್ರಾರಂಭವಾಗಿ ಪ್ರಸ್ತುತ ಈಗ

3485 ಸದಸ್ಯರಾಗಿದ್ದು. 1.86.59.800 ರೂ ಶೇರು ಸಂಗ್ರಹವಾಗಿದೆ. ಸಂಘವು ಸಂಪೂರ್ಣ ಗಣಕೀಕೃತ ಮತ್ತು ಕೋರ್ ಬ್ಯಾಂಕಿಂಗ್ ಸೌಲಭ್ಯವನ್ನು ಹೊಂದಿದೆ. ಆರ್‌ಟಿಜಿಎಸ್ ಮತ್ತು ಎನ್ ಈ ಎಫ್




ಟಿ. ಈ ಸ್ಟಾಂಪಿಂಗ ಬಾಂಡ್ ಸೌಲಭ್ಯ ಕೂಡಾ ಹೊಂದಿದೆ. ಗ್ರಾಹಕರ ಅಭಿವೃದ್ಧಿ ಬಗ್ಗೆ ಶ್ರಮಿಸುತ್ತಾ ತೃಪ್ತಿಕರ ಲಾಭದತ್ತ ಹೆಜ್ಜೆ ಹಾಕುತ್ತಾ ಯಶಸ್ಸಿನ ಪಂಥದ ಕಡೆ ಸಾಗುತ್ತಿದೆ.

ಪ್ರಧಾನ ಕಚೇರಿ ಸೇರಿದಂತೆ ಲೋಕಾಪುರ ಮತ್ತು ಚಿಕ್ಕಾಲಗುಂಡಿ ಮೂರು ಶಾಖೆಗಳು ಕೆಲಸ ಮಾಡುತ್ತಿದ್ದು. ನಮ್ಮ ಪ್ರಧಾನ ಕಚೇರಿ ಸ್ವಂತ ಕಟ್ಟಡ ಕೂಡ ಪ್ರಗತಿಯಲ್ಲಿದ್ದು. ಶೀಘ್ರದಲ್ಲಿ ಉದ್ಘಾಟನೆ ನಡೆಯಲಿದೆ. ಇನ್ನೂ ಎರಡು ನೂತನ ಶಾಖೆಗಳನ್ನು ತೆರೆಯುವ ಕನಸನ್ನು ಸಂಘವು ಹೊಂದಿದೆ. ಎಂದರು.

ಉಪಾಧ್ಯಕ್ಷಎಸ್‌ಟಿಗಾಣಿಗೇರ.ಲೋಕಾಪುರ ಶಾಖೆಯ ಸಲಹಾ ಸಮಿತಿ ಅಧ್ಯಕ್ಷ ವಿ ಬಿ ಸಿಂಗರೆಡ್ಡಿ. ವಿ ಜಿ ದೇಶಪಾಂಡೆ. ಕೆ ವಾಯ ಅರಕೇರಿ. ಈಶ್ವರಪ್ಪ ಜಾಲಿಹಾಳ.ಬಸವರಾಜ ಪುಂಡಿಕಟಗಿ. ಸಿ ವಾಯ್ ಹೆಬ್ಬಳ್ಳಿ. ಯಲ್ಲಪ್ಪ ಪೂಜಾರ. ಆಯ್ ಟಿ ಅರಕೇರಿ. ಶಂಕ್ರಪ್ಪ ಶಿವನಿಚ್ಚಿ. ಪಾಂಡಪ್ಪ ಪೋಲೀಸ್. ಎಚ್ ವೈ ಅರಕೇರಿ. ಜಿ ಎಸ್ ದೊಡ್ಡಮನಿ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಶೈಲ್ ಚನ್ನಾಪುರ ಇದ್ದರು.

ಇದೇ ಸಂದರ್ಭದಲ್ಲಿ ಸಂಘದ ಸದಸ್ಯರ ಮಕ್ಕಳಿಗೆಪ್ರತಿಭಾಪುರಸ್ಕಾರನೀಡಲಾಯಿತು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State